Ph.: 08419 - 295069, 9481863850
Web.: www.uksouharda.com
mail : headoffice@uksouharda.in

ಸ್ಥಾಪನೆ : 23-05-2001
ರನಂ. : ಡಿ.ಆರ್.ಎಸ್./ ಆರ್.ಎಸ್.ಆರ್. / 2238 / 12-01-2011

# ಯು. ಕ. ಸೌಹಾರ್ದ ಕ್ರೆಡಿಟ್ ಸಹಕಾರಿ ಸಂಘ ನಿಯಮಿತ

**ಪ್ರಧಾನ ಕಛೇರಿ : 1ನೇ ಕ್ರಾಸ್, ಐ. ಬಿ. ರಸ್ತೆ, ಯಲ್ಲಾಪುರ - 581 359 (ಉ.ಕ.)**

## 23ನೇ

## ವಾರ್ಷಿಕ ವರದಿ
ಹಾಗೂ
## ಅಢಾವೆ ಪತ್ರಿಕೆ

## 2023-24



ವಾರ್ಷಿಕ ಸರ್ವಸಾಧಾರಣ ಸಭೆ
ದಿನಾಂಕ : 24-9-2024
ಸ್ಥಳ : ಅಡಿಕೆ ಭವನ, ಎಪಿಎಂಸಿ ಯಾರ್ಡ, ಯಲ್ಲಾಪುರ

# ಯು. ಕೆ. ಸೌಹಾರ್ದ ಕ್ರೆಡಿಟ್ ಸಹಕಾರಿ ಸಂಘ ನಿಯಮಿತ

ಪ್ರಧಾನ ಕಛೇರಿ : 1ನೇ ಕ್ರಾಸ್, ಐ. ಬಿ. ರಸ್ತೆ, ಯಲ್ಲಾಪುರ - 581 359 (ಉ.ಕ.)

## ಆಡಳಿತ ಮಂಡಳಿ

**ಶ್ರೀ ಪ್ರಮೋದ ಹೆಗಡೆ**
ಅಧ್ಯಕ್ಷರು

**ಶ್ರೀ ಸುಬ್ಬಯ್ಯ ಗಜಾನನ ಧೋಗಳೆ**
ಉಪಾಧ್ಯಕ್ಷರು

ಶ್ರೀ ಗಜಾನನ ಶಂಕರ ಗಾಂವ್ಕರ
ಶ್ರೀ ಮಹಾಭಲೇಶ್ವರ ಮಹಾದೇವ ಹೆಗಡೆ
ಶ್ರೀ ರಮೇಶ ಸೀತಾರಾಮ ಪ್ರಸಾದ
ಶ್ರೀ ನಾರಾಯಣ ವೆಂಕಟ್ರಮಣ ಉಡದಂಗಿ
ಶ್ರೀ ಸದಾನಂದ ರಾಮಚಂದ್ರ ಭಟ್ಟ
ಶ್ರೀ ದೀಪಕ ರಾಜಾರಾಮ ಹೆಗಡೆ (30-03-2024 ರ ವರೆಗೆ)
ಶ್ರೀಮತಿ ರೇಖಾ ಮಹಾಭಲೇಶ್ವರ ಹೆಗಡೆ (24-05-2023 ರ ವರೆಗೆ)

ಶ್ರೀ ರವಿ ಪರಮೇಶ್ವರ ಭಟ್ಟ
ಶ್ರೀ ಗಣಪತಿ ಶಂಕರ ಭಟ್ಟ
ಶ್ರೀ ದೇಮಣ್ಣ ಶೇಷು ಕೇಸರಕರ
ಶ್ರೀ ಭಾಸ್ಕರ ಲಕ್ಷ್ಮಣ ಸಿದ್ಧಿ
ಶ್ರೀ ಮೆಹಬೂಬಅಲಿ ಡಿ. ಮುಲ್ಲಾ
ಶ್ರೀಮತಿ ರಾಜೇಶ್ವರಿ ರವಿ ಭಟ್ಟ

### - ಆಮಂತ್ರಿತ ನಿರ್ದೇಶಕರು -

ಶ್ರೀ ನಾಗೇಂದ್ರ ಅನಂತ ಭಟ್ಟ - ಬಾಹ್ಯ ತಜ್ಞರು

### - ಪ್ರಧಾನ ವ್ಯವಸ್ಥಾಪಕರು -

ಶ್ರೀ ಎನ್. ಜಿ. ಕಿರಣ


### - ಗೌರವ ಸಲಹೆಗಾರರು -

ಶ್ರೀ ಪರಮೇಶ್ವರ ಜಿ. ಹೆಗಡೆ

| ಶಾಖೆಗಳು | ದೂರವಾಣಿ ಸಂಖ್ಯೆ |
|---|---|
| ಪ್ರಧಾನ ಕಛೇರಿ | 08419-295069 |
| ಯಲ್ಲಾಪುರ | 08419-237809 |
| ಗುಳ್ಳಾಪುರ | 08419-295319 |
| ಗೋಕರ್ಣ | 08386-200396 |
| ಕುಮಟಾ | 08386-220220 |
| ಶಿರಸಿ | 08384-450052 |
| ಸಿದ್ದಾಪುರ | 8024487595 |
| ದಾಂಡೇಲಿ | 08284-230099 |
| ಹೊನ್ನಾವರ | 08387-223333 |
| ಮುಂಡಗೋಡ | 8277661210 |
| ಮಹಿಳಾ ಶಾಖೆ, ಕುಮಟಾ | 08386-299998 |

**ಸಹಕಾರಿಯ ಬ್ಯಾಂಕರುಗಳು**

ದಿ ಕೆ. ಡಿ. ಸಿ. ಸಿ. ಬ್ಯಾಂಕ್ ಅ., ಶಿರಸಿ
ವಿಕಾಸ ಅರ್ಬನ್ ಕೋ-ಆಪ್. ಬ್ಯಾಂಕ್
ಭಾರತೀಯ ಸ್ಟೇಟ್ ಬ್ಯಾಂಕ್
ಕೆನರಾ ಬ್ಯಾಂಕ್
ಐ.ಸಿ.ಐ.ಸಿ.ಐ. ಬ್ಯಾಂಕ್
ಕೊಟಕ್ ಮಹೀಂದ್ರಾ ಬ್ಯಾಂಕ್
ಕರ್ನಾಟಕ ಬ್ಯಾಂಕ್ ಅ
ದಿ ಶಿರಸಿ ಅರ್ಬನ್ ಸಹಕಾರಿ ಬ್ಯಾಂಕ್
ಡಿ. ಬಿ. ಎಸ್. ಬ್ಯಾಂಕ್, ಕಾರವಾರ
ಹೆಚ್‌ಡಿಎಫ್‌ಸಿ ಬ್ಯಾಂಕ್
ಬ್ಯಾಂಕ್ ಆಫ್ ಬರೋಡ



## ಶ್ರದ್ಧಾಂಜಲಿ

ಸಹಕಾರಿ ಸಂಘದ ಸಂಸ್ಥಾಪಕ ಉಪಾಧ್ಯಕ್ಷರಾಗಿ 20 ವರ್ಷಗಳ ಕಾಲ ಸೇವೆ ಸಲ್ಲಿಸಿದ
**ಶ್ರೀ ವಿಶ್ವೇಶ್ವರ ಶಂಕರ ಭಟ್ಟ**, ಇಟ್ಟಮನೆ ಕಳಚೆ
ಇವರು ದಿನಾಂಕ: 23-08-2024 ರಂದು ದೈವಾದೀನರಾಗಿದ್ದು ಸಂಘದ ಆಡಳಿತ ಮಂಡಳಿಯು ಅವರ ಅಗಲಿಕೆಗೆ ತೀವ್ರ ಸಂತಾಪ ವ್ಯಕ್ತಪಡಿಸುತ್ತಾ, ಅವರ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ಪ್ರಾರ್ಥಿಸುತ್ತಿದೆ.

# ಯು. ಕೆ. ಸೌಹಾರ್ದ ಕ್ರೆಡಿಟ್ ಸಹಕಾರಿ ಸಂಘ ನಿ.,

ಯಲ್ಲಾಪುರ (ಉ. ಕ.)

## ವಾರ್ಷಿಕ ಸರ್ವಸಾಧಾರಣ ಸಭೆಯ ನೋಟೀಸು

ಯಾವತ್ತೂ ಸದಸ್ಯರಿಗೆ ಹಾಗೂ ಅಭಿಮಾನಿಗಳಿಗೆ,

ನಮ್ಮ ಸಹಕಾರಿ ಸಂಘದ 2023–24 ನೇ ಸಾಲಿನ ವಾರ್ಷಿಕ ಸರ್ವಸಾಧಾರಣ ಸಭೆಯನ್ನು ದಿನಾಂಕ : 24–9–2024 ಮಂಗಳವಾರ ಮಧ್ಯಾಹ್ನ 3–30 ಗಂಟೆಗೆ ಸಹಕಾರಿಯ ಅಧ್ಯಕ್ಷರಾದ ಶ್ರೀ ಪ್ರಮೋದ ಹೆಗಡೆ ಇವರ ಅಧ್ಯಕ್ಷತೆಯಲ್ಲಿ ಯಲ್ಲಾಪುರದ ಎ.ಪಿ.ಎಮ್.ಸಿ. ಅಡಿಕೆ ಭವನದಲ್ಲಿ ಕರೆಯಲಾಗಿದೆ. ತಾವೆಲ್ಲರೂ ಸಕಾಲಕ್ಕೆ ಬರಬೇಕಾಗಿ ವಿನಂತಿ.

ಸಭೆಯಲ್ಲಿ ಚರ್ಚಿಸತಕ್ಕ ವಿಷಯಗಳ ಪಟ್ಟಿ

01. ಸಭೆಗೆ ಆಗಮಿಸಿದ ಸದಸ್ಯರಿಗೆ, ಗಣ್ಯರಿಗೆ ಸ್ವಾಗತ ಹಾಗೂ ಸಭಾ ಕಾರ್ಯಕ್ರಮದ ಪ್ರಾರಂಭ.
02. ವಾರ್ಷಿಕ ಮಹಾಸಭೆಯ ವಿಷಯ ಪಟ್ಟಿ ಮಂಡನೆ.
03. 31–03–2024 ಕ್ಕೆ ಮುಗಿದ 2023–24 ನೇ ಸಾಲಿನ ಸಹಕಾರಿಯ ಕಾರ್ಯವ್ಯವಹಾರಗಳ ಕುರಿತು ಮಂಡಿಸಿದ ವಾರ್ಷಿಕ ವರದಿ ಹಾಗೂ ಯಾವತ್ತೂ ಆರ್ಥಿಕ ತಃಖ್ತೆಗಳನ್ನು ಪರಿಶೀಲಿಸಿ ದೃಢೀಕರಿಸುವುದು.
04. ಸಹಕಾರಿ ಸಂಘದ 2023–24ನೇ ಸಾಲಿನ ಶಾಸನಬದ್ದ ಲೆಕ್ಕ ಪರಿಶೋಧಕರ ಲೆಕ್ಕ ಪರಿಶೋಧನಾ ವರದಿ ಹಾಗೂ ಅದಕ್ಕೆ ಆಡಳಿತ ಮಂಡಳಿಯವರು ಕೊಟ್ಟ ವಿವರಣೆಗಳನ್ನು ಪರಿಶೀಲಿಸಿ ದೃಢೀಕರಿಸುವುದು.
05. 2023–24ನೇ ಸಾಲಿನ ಸಹಕಾರಿ ಸಂಘದ ನಿವ್ವಳ ಲಾಭವನ್ನು ವಿಭಾಗಣೆ ಮಾಡುವುದು.
06. 2024–25ನೇ ಸಾಲಿನ ಬಗ್ಗೆ ನಿರ್ದೇಶಕ ಮಂಡಳಿಯವರು ತಯಾರಿಸಿದ ಅಂದಾಜು ಪತ್ರಿಕೆಗೆ ಅನುಮೋದನೆ ನೀಡುವುದು.
07. 2023–24ನೇ ಸಾಲಿನಲ್ಲಿ ಆ ವರ್ಷದ ಅಂದಾಜು ಪತ್ರಿಕೆಗಿಂತ ಹೆಚ್ಚಳವಾದ ಖರ್ಚುಗಳಿಗೆ ಅನುಮೋದನೆ ನೀಡುವುದು.
08. 2024–25ನೇ ಸಾಲಿನ ಬಗ್ಗೆ ಅಧಿಕೃತ ಮತ್ತು ಆಂತರಿಕ ಲೆಕ್ಕಪರಿಶೋಧಕರನ್ನು ನೇಮಕಾತಿ ಮಾಡಿಕೊಳ್ಳುವ ಕುರಿತು.
09. ನಿಧಿಗಳ ವರ್ಗಾವಣೆಗೆ ಅನುಮೋದನೆ ನೀಡುವ ಕುರಿತು.
10. ಸಿಬ್ಬಂದಿಗಳ ವೃಂದಬಲ ಪರಿಷ್ಕರಿಸಿದ್ದನ್ನು ದೃಡೀಕರಿಸುವುದು ಹಾಗೂ 2023–24ನೇ ಸಾಲಿನಲ್ಲಿ ನೇಮಕಗೊಂಡ ಸಿಬ್ಬಂದಿಗಳ ಯಾದಿಯನ್ನು ಪರಿಶೀಲಿಸಿ ದೃಡೀಕರಿಸುವದು.
11. ನಿರ್ದೇಶಕರುಗಳ ಅಥವಾ ಮುಖ್ಯ ಕಾರ್ಯನಿರ್ವಾಹಕರ ಹತ್ತಿರದ ಸಂಬಂಧಿಗಳನ್ನು ನೌಕರರೆಂದು ನೇಮಕ ಮಾಡಿಕೊಂಡಿದ್ದಲ್ಲಿ ಪರಿಶೀಲಿಸುವುದು.
12. 2023–24ನೇ ಸಾಲಿನಲ್ಲಿ ಸದಸ್ಯರನ್ನಾಗಿ ನೇಮಿಸಿಕೊಂಡ ಮತ್ತು ತೆಗೆದು ಹಾಕಿದ ಅಥವಾ ಇನ್ನಿತರ ರೀತಿಯಲ್ಲಿ ಮುಕ್ತಾಯಗೊಳಿಸಿದ ಸದಸ್ಯತ್ವದ ಬಗೆಗಿನ ಸಂಕ್ಷಿಪ್ತ ವರದಿ ದೃಢೀಕರಿಸುವುದು.
13. ಮಂಡಳಿಯ ಸದಸ್ಯರಿಂದ ಸಹಕಾರಿ ಸಂಘದ ಸೇವೆಗಳ ಉಪಯೋಗದ ಅವಲೋಕನ, ಅಗತ್ಯವುಳ್ಳ ವಿನಾಯಿತಿ

ನೀಡುವ ಕುರಿತು.

14. ಸದಸ್ಯರಿಗೆ ಅವಶ್ಯವಿರುವ ಸಾಲಗಳ ವಿತರಣೆಯ ಪತ್ತು ನಿರ್ಣಯಿಸಲು ಆಡಳಿತ ಮಂಡಳಿಗೆ ಅಧಿಕಾರ ನೀಡುವ ಕುರಿತು.
15. ಸಹಕಾರಿ ಸಂಘದ ವ್ಯವಹಾರಗಳ ಅನುಕೂಲತೆಗಾಗಿ ಹೊರಗಿನಿಂದ ಸಂಗ್ರಹಿಸಬಹುದಾದ ಠೇವು ಹಾಗೂ ಸಾಲಗಳನ್ನು ಪಡೆಯುವ ಪರಮಾವಧಿ ಮಿತಿ ನಿರ್ಧರಿಸುವುದು.
16. 2024–25ನೇ ಸಾಲಿನಲ್ಲಿ ಕೈಗೊಳ್ಳಬಹುದಾದ ಹೊಸ ಕಾರ್ಯಚಟುವಟಿಕೆಗಳ ಕುರಿತು ನಿರ್ಣಯಿಸುವುದು.
17. ಕಾಲಕಾಲಕ್ಕೆ ಅವಶ್ಯವುಳ್ಳಂತೆ ಒಳ ನಿಯಮಾವಳಿಗಳನ್ನು ರಚಿಸಿಕೊಳ್ಳಲು, ತಿದ್ದುಪಡಿ ಮಾಡಲು ಆಡಳಿತ ಮಂಡಳಿಗೆ ಅಧಿಕಾರ ನೀಡುವ ಕುರಿತು ಹಾಗೂ 2023–24ನೇ ಸಾಲಿನಲ್ಲಿ ಆಡಳಿತ ಮಂಡಳಿಯು ರಚಿಸಿಕೊಂಡ ಒಳನಿಯಮಾವಳಿಗಳು ಹಾಗೂ ತಿದ್ದುಪಡಿಗಳನ್ನು ಮಂಜೂರು ಮಾಡಿದ್ದನ್ನು ದೃಢೀಕರಿಸುವುದು.
18. ಸದಸ್ಯರಿಗೆ ಬಡ್ಡಿ ಹಾಗೂ ದಂಡದ ಬಡ್ಡಿ ತುಂಬುವಲ್ಲಿ ರಿಯಾಯತಿ ನೀಡಿದ ಕುರಿತು ಅನುಮೋದಿಸುವುದು.
19. ಮೀಸಲು ಮತ್ತು ಇತರ ನಿಧಿಗಳ ವಾಸ್ತವಿಕ ಬಳಕೆಯ ಪುನರವಲೋಕನ.
20. ಕಾರ್ಯಾಚರಣೆ ಕೊರತೆ ಏನಾದರೂ ಇದ್ದಲ್ಲಿ ಅದರ ಪುನರಾವಲೋಕನ.
21. ನಿರ್ದೇಶಕರಿಗೆ ಮತ್ತು ಅವರ ಸಂಬಂಧಿಕರಿಗೆ ನೀಡಿದ ಸಾಲಗಳು ಮತ್ತು ಮುಂಗಡಗಳು ಮತ್ತು ಸುಸ್ತಿ ಸಾಲಗಳು ಯಾವುದಾದರೂ ಇದ್ದಲ್ಲಿ, ಸುಸ್ತಿ ಸಾಲಗಳ ವಸೂಲಾತಿಗೆ ತೆಗೆದುಕೊಂಡ ಕ್ರಮದ ಪರಿಶೀಲನೆ.
22. ಒಟ್ಟುಗೂಡುವಿಕೆ, ವಿಭಜನೆ, ವಿಲಿನತೆ ಮತ್ತು ಸ್ವತ್ತುಗಳ ಮತ್ತು ಹೊಣೆಗಾರಿಕೆಗಳ ವರ್ಗಾವಣೆ ಕುರಿತು.
23. ವಸೂಲಾಗದೆಂದು ಪರಿಗಣಿತವಾದ ಸುಸ್ತಿ ಸಾಲಗಳ ಬಗ್ಗೆ ತೀರ್ಮಾನ.
24. ಆಡಳಿತ ಮಂಡಳಿಯಲ್ಲಿನ ನಿರ್ದೇಶಕರುಗಳನ್ನು ತೆಗೆದುಹಾಕುವುದು.
25. 37 ನೇ ಪ್ರಕರಣದ ಅಡಿಯಲ್ಲಿ ವಿಚಾರಣಾ ವರದಿ ಯಾವುದಾದರೂ ಇದ್ದಲ್ಲಿ ಅದರ ಬಗ್ಗೆ ಕೈಗೊಂಡ ಕ್ರಮಗಳ ವರದಿ.
26. ಸಹಕಾರಿ ಸಂಘವು ಇತರ ಸಹಕಾರಿ ಸಹಕಾರಿಗಳೊಂದಿಗೆ ಹೊಂದಿರುವ ಸದಸ್ಯತ್ವದ ವರದಿ.
27. 14, 15, ಮತ್ತು 16 ನೇ ಪ್ರಕರಣಗಳ ಅಡಿಯಲ್ಲಿ ಸೃಜಿಸಲಾದ ಯಾವುದೇ ಸಂಸ್ಥೆ ಇದ್ದಲ್ಲಿ ಅದರ ವಾರ್ಷಿಕ ವರದಿಯ ಮತ್ತು ಲೆಕ್ಕಗಳ ಪುನರಾವಲೋಕನ.
28. ಮಂಡಳಿಯಿಂದ ಯಾವ ವ್ಯಕ್ತಿಯ ಸದಸ್ಯತ್ವದ ಅರ್ಜಿಯನ್ನು ನಿರಾಕರಿಸಿದೆಯೋ ಆ ವ್ಯಕ್ತಿಯು ಸಲ್ಲಿಸಿದ ಅಪೀಲು ಯಾವುದಾದರೂ ಇದ್ದಲ್ಲಿ ಅದರ ಪರಿಗಣನೆ.
29. ನಿರ್ದೇಶಕರ ಮತ್ತು ಪದಾಧಿಕಾರಿಗಳ ನಡತೆ ಸಂಹಿತೆಯ ರಚನೆ.
30. ಸಹಕಾರಿಯ ಸಮಾಪನ ಮತ್ತು ಉಪವಿದಿಗಳಲ್ಲಿ ನಿರ್ದಿಷ್ಟಪಡಿಸಿದ ಅಂಥ ಇತರ ಪ್ರಕ್ರಿಯೆಗಳು.
31. ಅಧ್ಯಕ್ಷರ ಅನುಮತಿಯೊಂದಿಗೆ ಚರ್ಚಿಸಬಹುದಾದ ಇತರ ವಿಷಯಗಳು.
32. ಮಹಾಸಭೆಯಿಂದ ಅನುಮೋದಿಸಲ್ಪಟ್ಟ ಎಲ್ಲ ನಿರ್ಣಯಗಳನ್ನು ಓದಿ ದಾಖಲಿಸುವುದು.

ಆಡಳಿತ ಮಂಡಳಿಯ ಅನುಮೋದನೆಯೊಂದಿಗೆ,

ಸ್ಥಳ : ಯಲ್ಲಾಪುರ

**ಎನ್. ಜಿ. ಕಿರಣ**

ದಿನಾಂಕ : 30–08–2024

ಪ್ರಧಾನ ವ್ಯವಸ್ಥಾಪಕರು

# ಯು. ಕೆ. ಸೌಹಾರ್ದ ಕ್ರೆಡಿಟ್ ಸಹಕಾರಿ ಸಂಘ ನಿ.,

ಯಲ್ಲಾಪುರ (ಉ. ಕ.)

## 2022-23 ನೇ ಸಾಲಿನ
## ವಾರ್ಷಿಕ ವರದಿ

ಪ್ರಿಯ ಸಹಕಾರಿಗಳೇ,

ನಮ್ಮ ಸಹಕಾರಿ ಸಂಘದ 31-03-2024ಕ್ಕೆ ಮುಗಿದ 23 ನೇ ವರ್ಷದ ವ್ಯವಹಾರಗಳ ಸಂಕ್ಷಿಪ್ತ ಸಿಂಹಾಲೋಕನ ಹಾಗೂ ದೃಢೀಕೃತ ಲೆಕ್ಕಪತ್ರಗಳನ್ನು ಒಳಗೊಂಡ ವಾರ್ಷಿಕ ವರದಿಯನ್ನು ತಮ್ಮೆಲ್ಲರ ಮುಂದೆ ಸಾದರಪಡಿಸಲು ಹರ್ಷಿಸುತ್ತೇನೆ.

ಸಹಕಾರಿ ಸಂಘವು ತನ್ನ ದೈನಂದಿನ ವ್ಯವಹಾರಗಳ ಜೊತೆಗೆ ಹೊಸ ಹೊಸ ಆಲೋಚನೆಗಳನ್ನು ಪ್ರಸ್ತುತಪಡಿಸುವಲ್ಲಿ ಮತ್ತು ಸಂಸ್ಥೆಯ ಸರ್ವಾಂಗೀಣ ಅಭಿವೃದ್ಧಿಗೆ ಪೂರಕವಾಗಿ ಆಡಳಿತ ಮಂಡಳಿಯ ನಿರ್ದೇಶಕರು ತಮ್ಮ ಸಂಪೂರ್ಣ ಸಮಯ ಹಾಗೂ ಅನುಭವಗಳನ್ನು ನೀಡುತ್ತಾ ಬಂದಿದ್ದಕ್ಕೆ ಅಭಿನಂದಿಸುತ್ತಾ ಹಿಂದಿನ ವರ್ಷದ ಒಟ್ಟಾರೆ ವ್ಯವಹಾರಗಳ ವಿಮರ್ಶೆ  ಪ್ರಸ್ತುತ ವರ್ಷದ ಕೈಗೊಳ್ಳಬೇಕಾದ ಕಾರ್ಯ ಚಟುವಟಿಕೆಗಳು ಸಮಗ್ರ ವಿಶ್ಲೇಷಣೆ ಹಾಗೂ ಮುಂದಿನ ವರ್ಷದ ಪ್ರಗತಿಯ ಮುನ್ನೋಟಕ್ಕೆ ಈ ವರದಿಯನ್ನು ಸಾದರಪಡಿಸಿದೆ.

### ವರದಿಯ ವರ್ಷ ಕೈಗೊಂಡ ಕಾರ್ಯಚಟುವಟಿಕೆಗಳ ಸಂಕ್ಷಿಪ್ತ ವಿವರಣೆಗಳು :

ಪ್ರಧಾನ ಕಛೇರಿ ಹಾಗೂ ಎಲ್ಲಾ ಶಾಖೆಗಳಲ್ಲಿ ನೀಡಿದ ಸಾಲಗಳ ಪೈಕಿ ಬಾಕಿ ಇದ್ದ ಸಾಲ, ಠೇವಣಿಗಳಲ್ಲಾದ ಹೆಚ್ಚಳ ಇವುಗಳ ವಿವರಗಳು ಈ ಕೆಳಕಂಡಂತೆ ಇರುತ್ತದೆ. (ರೂ. ಲಕ್ಷಗಳಲ್ಲಿ.)

| ಶಾಖೆಗಳು | ಬಾಕಿ ಇದ್ದ ಸಾಲಗಳು (ವರ್ಷಾಂತ್ಯಕ್ಕೆ ಇದ್ದಂತೆ) | | ಠೇವಣಿ ಸಂಗ್ರಹಣೆ (ವರ್ಷಾಂತ್ಯಕ್ಕೆ ಇದ್ದಂತೆ) | | ಗಳಿಸಿದ ಲಾಭ |
|---|---|---|---|---|---|
| | | ಶೇ. ಹೆಚ್ಚಳ | | ಶೇ. ಹೆಚ್ಚಳ | |
| ಪ್ರಧಾನ ಕಛೇರಿ | 86.28 | 26.40 | 16.78 | 1.39 | -81.89 |
| ಯಲ್ಲಾಪುರ | 3509.77 | 12.33 | 4955.72 | 14.73 | 71.73 |
| ಗುಳ್ಳಾಪುರ | 341.81 | 30.83 | 1245.21 | 25.50 | 6.87 |
| ಗೋಕರ್ಣ | 1013.64 | 36.48 | 1195.58 | 27.14 | 23.80 |
| ಕುಮಟಾ | 1111.15 | 1.50 | 1108.82 | 18.53 | 30.19 |
| ಶಿರಸಿ | 1261.34 | 21.02 | 1409.19 | 15.88 | 1.89 |
| ಸಿದ್ದಾಪುರ | 237.58 | -7.27 | 1300.52 | -2.43 | 14.80 |
| ದಾಂಡೇಲಿ | 1261.97 | 35.04 | 428.43 | 24.68 | 42.04 |
| ಹೊನ್ನಾವರ | 1281.98 | 12.30 | 806.99 | 20.80 | 36.14 |
| ಮುಂಡಗೋಡ | 432.59 | 17.13 | 275.87 | 32.51 | 2.73 |
| ಮಹಿಳಾ ಶಾಖೆ, ಕುಮಟಾ | 202.76 | 129.28 | 367.09 | 106.34 | 0.17 |
| ಅಂತೂ.. | **10740.87** | | **13110.20** | | **148.47** |

ಈ ಪ್ರಕಾರ ಸಾಲ ಮತ್ತು ಠೇವಣಿಗಳ ವಿವರಗಳು ಇರುತ್ತಿದ್ದು, ವರದಿ ವರ್ಷ ವ್ಯವಹಾರಿಕ ಲಾಭ ರೂ. 148.47 ಲಕ್ಷ ಇದ್ದು, 109.67 ಲಕ್ಷ ನಿಕ್ಕಿ ಲಾಭಗಳಿಸಿದೆ.

ಈ ಎಲ್ಲಾ ಅಂಶಗಳನ್ನು ಒಳಗೊಂಡ ವಿವರಣೆಗಳನ್ನು ಸಾದರಪಡಿಸುತ್ತಾ 2023–24ನೇ ಸಾಲಿನ ಸಹಕಾರಿ ಸಂಘದ ಎಲ್ಲಾ ವ್ಯವಹಾರಗಳ ಪರಿಶೋಧಿತ ಲೆಕ್ಕಪತ್ರದೊಂದಿಗೆ ತಮ್ಮ ಮುಂದೆ ಸಾದರಪಡಿಸುತ್ತೇವೆ.

**ಸದಸ್ಯತ್ವ :**

ಸಹಕಾರಿ ಸಂಘದ ಸದಸ್ಯತ್ವದಲ್ಲಿ ವರ್ಷದ ಆರಂಭದಲ್ಲಿ 18481 'ಅ' ವರ್ಗದ ಸದಸ್ಯರು ಇದ್ದು, ವರದಿಯ ವರ್ಷದಲ್ಲಿ 'ಅ' ವರ್ಗದ ಸದಸ್ಯರಾಗಿ 1688 ಜನ ಸದಸ್ಯತ್ವ ಪಡೆದಿದ್ದು, 201 ಜನ ಸದಸ್ಯರು ಸದಸ್ಯತ್ವದಿಂದ ಕಡಿಮೆಗೊಂಡಿರುತ್ತಾರೆ. ಮತ್ತು ವರ್ಷಾಂತ್ಯಕ್ಕೆ 19968 'ಅ' ವರ್ಗದ ಸದಸ್ಯರನ್ನು ಸಹಕಾರಿ ಸಂಘವು ಹೊಂದಿರುತ್ತದೆ.

**ಶೇರು ಬಂಡವಾಳ :**

ವರ್ಷದ ಆರಂಭದಲ್ಲಿ ಸದಸ್ಯರ ಶೇರು ಹಣ ರೂ. 616.01 ಲಕ್ಷ ಇರುತ್ತಿದ್ದು, ವರದಿಯ ವರ್ಷದಲ್ಲಿ ರೂ. 125.97 ಲಕ್ಷ ಜಮಾ ಆಗಿ ಮರು ಪಾವತಿ ಮಾಡಿದ ಶೇರು ರೂ. 70.33 ಲಕ್ಷ ಆಗಿರುತ್ತದೆ. ವರ್ಷಾಂತ್ಯಕ್ಕೆ ರೂ. 671.65 ಲಕ್ಷ ಶೇರು ಭಂಡವಾಳ ಇದ್ದು, ವರ್ಷದಲ್ಲಿ ಶೇರಿನ ಹೆಚ್ಚಳ ಶೇಕಡಾ 9.03% ಆಗಿರುತ್ತದೆ.

**ನಿಧಿಗಳು :**

ವರ್ಷದ ಆರಂಭಕ್ಕೆ ಒಟ್ಟು ನಿಧಿಗಳು ರೂ. 844.74 ಲಕ್ಷದಷ್ಟು ಇದ್ದು, ವರದಿಯ ವರ್ಷ ಲಾಭ ವಿಭಾಗಣೆ ಹಾಗೂ ಇತರೇ ಮೂಲಗಳಿಂದ ಒಟ್ಟು ರೂ. 92.63 ಲಕ್ಷ ಜಮಾ ಆಗಿರುತ್ತದೆ. ವರ್ಷದಲ್ಲಿ ರೂ. 3.49 ಲಕ್ಷದಷ್ಟು ವಿನಿಯೋಗಿಸಲ್ಪಟ್ಟಿದ್ದು, ರೂ. 2.78 ಗುಂತಾವಣೆ ಭದ್ರತಾ ನಿಧಿಯನ್ನು ಕರಡು ಸಾಲದ ನಿಧಿಗೆ ಮತ್ತು ರೂ. 15 ಲಕ್ಷ ಆದಾಯ ತೆರಿಗೆ ಅನುವನ್ನು ಸಂಘದ ಬೆಳ್ಳಿ ಹಬ್ಬದ ನಿಧಿಗೆ ವರ್ಗಾಯಿಸಲಾಗಿದ್ದು ವರ್ಷಾಂತ್ಯಕ್ಕೆ ರೂ. 917.76 ಲಕ್ಷದಷ್ಟು ನಿಧಿಗಳು ಇರುತ್ತದೆ. ಮತ್ತು ನಿಧಿಗಳನ್ನು ಕಾಯ್ದೆ ಅನ್ವಯ ಸೂಕ್ತ ಉದ್ದೇಶಕ್ಕೆ ಬಳಸಲಾಗುತ್ತಿದ್ದು, ಮಹಾಸಭೆಯ ಅನುಮೋದನೆಯನ್ನು ಬಯಸುತ್ತೇವೆ.

ಒಟ್ಟೂ ನಿಧಿಗಳಲ್ಲಿ ಕಾಯ್ದಿಟ್ಟ ನಿಧಿ ಸಾಮಾನ್ಯ ಕ್ಷೇಮ ನಿಧಿ, ಅನಿರಿಕ್ಷಿತ ನಷ್ಟ ನಿಧಿ ಇವುಗಳನ್ನು ಪ್ರತ್ಯೇಕವಾಗಿ ಗುಂತಾಯಿಸಲ್ಪಟ್ಟಿದ್ದು, ಕರಡು ಸಾಲದ ನಿಧಿಗಾಗಿ ರೂ. 448.84 ಲಕ್ಷ ಪ್ರತ್ಯೇಕವಾಗಿ ತೆಗೆದಿರಿಸಲಾಗಿದೆ. ಇದರಿಂದ ಸಂಸ್ಥೆಯ ಆರ್ಥಿಕ ಹೊಣೆಗಾರಿಕೆಯನ್ನು ನಿಭಾಯಿಸಲು ಹೆಚ್ಚಿನ ಆತ್ಮ ವಿಶ್ವಾಸ ಹೊಂದಿರುತ್ತದೆ.

**ಠೇವುಗಳು :**

ನಮ್ಮ ಸಹಕಾರಿ ಸಂಘದಲ್ಲಿ ತಮ್ಮ ಸದಸ್ಯರಿಂದಲೇ ಸಂಗ್ರಹಿಸಲ್ಪಟ್ಟ ಎಲ್ಲಾ ರೀತಿಯ ಠೇವುಗಳು ಸೇರಿ ವರ್ಷದ ಆರಂಭದಲ್ಲಿದ್ದ ರೂ. 112.24 ಕೋಟಿಗಳಿದ್ದು, ವರದಿ ವರ್ಷದ ಅಂತ್ಯಕ್ಕೆ ಒಟ್ಟು ಠೇವುಗಳ ಮೊತ್ತ ರೂ. 131.10 ಕೋಟಿಯಷ್ಟು ಆಗಿರುತ್ತದೆ. ವರ್ಷದಲ್ಲಿ ಠೇವುಗಳಲ್ಲಿ ಶೇಕಡಾ 16.80 ಹೆಚ್ಚಳ ಆಗಿರುತ್ತದೆ. ವಾರ್ಷಿಕ ಗುರಿ ಸಾಧನೆಗಾಗಿ ಮುಂದಿನ ದಿನಗಳಲ್ಲಿ ಹೊಸ ಹೊಸ ಠೇವು ಯೋಜನೆಗಳ ಮೂಲಕ ಮತ್ತು ಗ್ರಾಹಕರಿಗೆ ಇನ್ನೂ ಹೆಚ್ಚಿನ ಸೌಲಭ್ಯಗಳನ್ನು ಒದಗಿಸುವ ಮೂಲಕ 2024–25 ನೇ ಸಾಲಿನ ಕ್ರೀಯಾ ಯೋಜನೆಯಂತೆ ಗುರಿ ತಲುಪಲು ತಮ್ಮೆಲ್ಲರ ಸಹಕಾರವನ್ನು ಕೋರುತ್ತೇವೆ.

**ಕೊಡತಕ್ಕ ಸಾಲಗಳು :**

ವರದಿಯ ವರ್ಷಾಂತ್ಯಕ್ಕೆ ಜಿಲ್ಲಾ ಮಧ್ಯವರ್ತಿ ಬ್ಯಾಂಕ್ ಮತ್ತು ವಿಕಾಸ ಅರ್ಬನ್ ಕೋ-ಆಪ್ ಬ್ಯಾಂಕ್ ಯಲ್ಲಾಪುರ ಸೇರಿ ರೂ. 2.87 ಕೋಟಿ ರೂಪಾಯಿ ಕೊಡತಕ್ಕ ಸಾಲ ಇದ್ದು, ಇದರಲ್ಲಿ ವರ್ಷಾಂತ್ಯದ ವ್ಯವಹಾರದಲ್ಲಿ ಮಾತ್ರ ಬಾಕಿ ಇರುವುದು ಕಾಣಿಸುತ್ತಿದ್ದು, ವಿಕಾಸ ಅರ್ಬನ್ ಕೋ-ಆಪ್ ಬ್ಯಾಂಕ್ ಯಲ್ಲಾಪುರದಲ್ಲಿ ತಾತ್ಕಾಲಿಕ ವ್ಯವಸ್ಥೆಗಾಗಿ ಠೇವಣಿ ಆಧಾರಿತವಾಗಿ ಒಡಿಡಿಎಲ್ ಸಾಲವೆಂದು ರೂ. 7.50 ಕೋಟಿಯ ಮಿತಿ ಹೊಂದಿದ್ದು ರೂ. 2.86 ಕೋಟಿ ಬಾಕಿ ಇರುತ್ತದೆ. ಹಾಗೂ ಜಿಲ್ಲಾ ಮಧ್ಯವರ್ತಿ ಬ್ಯಾಂಕಿನಲ್ಲಿ ರೂ. 4.50 ಕೋಟಿ ವ್ಯವಹಾರಿಕ ಸಾಲದ ಮಿತಿಯನ್ನು ಹೊಂದಿದೆ. ಇದರಲ್ಲಿ 0.79 ಲಕ್ಷ ಸಾಲ ಬಾಕಿ ಇರುತ್ತದೆ.

**ಇತರ ಕೊಡತಕ್ಕ ಬಾಬ್ತುಗಳು :**

ವರ್ಷಾಂತ್ಯಕ್ಕೆ ಅಥಾವೆ ಪ್ರಕಾರ ರೂ. 176.85 ಲಕ್ಷದಷ್ಟು ಕೊಡತಕ್ಕ ಬಾಬ್ತುಗಳಲ್ಲಿ ಇರುತ್ತಿದ್ದು, ಇದರಲ್ಲಿ ಸದಸ್ಯರ ಠೇವುಗಳ ಮೇಲೆ ಕೊಡಬೇಕಾದ ಬಡ್ಡಿ, ಹಾಗೂ ಇತ್ಯಾದಿ ಕಾನೂನು ಬದ್ದವಾಗಿ ಕಲ್ಪಿಸಬೇಕಾದ ಅನುವುಗಳನ್ನು ಒಳಗೊಂಡಂತೆ ಎಲ್ಲಾ ರೀತಿಯ ಕೊಡಬೇಕಾದ ಮೊತ್ತಗಳನ್ನು ತೆಗೆದಿರಿಸಲಾಗಿದೆ.

**ನಗದು ಶಿಲ್ಕು :**

31-03-2024ಕ್ಕೆ ಇದ್ದಂತೆ ವರ್ಷಾಂತ್ಯದ ದಿನದಂದು ನಗದು ಶಿಲ್ಕು ರೂ. 8820720.33 ಇರುತ್ತಿದ್ದು, ಬೇರೆ ಬೇರೆ ಬ್ಯಾಂಕುಗಳ ಚಾಲ್ತಿ ಖಾತೆಗಳಲ್ಲಿ ಒಟ್ಟು ರೂ. 20978776.06 ಶಿಲ್ಕು ಇರುತ್ತದೆ. ಶಾಖೆಗಳ ನಗದು ಶಿಲ್ಕುಗಳನ್ನು ಸಂಬಂಧ ಪಟ್ಟ ಅಧಿಕಾರಿಗಳು ಹಾಗೂ ಅಧ್ಯಕ್ಷರು ಕಾಲ ಕಾಲಕ್ಕೆ ಅನಿರಿಕ್ಷೀತ ಭೇಟಿ ನೀಡಿ ಪರಿಶೀಲನೆ ಮಾಡುತ್ತಿದ್ದು, ಯಾವುದೇ ನ್ಯೂನ್ಯತೆ ಇರುವುದಿಲ್ಲ.

**ಗುಂತಾವಣೆ :**

ಸಹಕಾರಿ ಸಂಘವು ಹೆಚ್ಚುವರಿ ಮೊತ್ತವನ್ನು ಅನುಸೂಚಿತ ಬ್ಯಾಂಕುಗಳಲ್ಲಿಯೇ ಗುಂತಾಯಿಸುವ ಪದ್ಧತಿ ಇಟ್ಟುಕೊಂಡಿದ್ದು, ಕಾನೂನು ಬದ್ಧವಾಗಿ ಇಡಬೇಕಾದ ಕಾಯ್ದಿಟ್ಟ ನಿಧಿ ರೂ. 16632235.50.00 ಕೆಡಿಸಿಸಿ ಬ್ಯಾಂಕಿನಲ್ಲಿ ಗುಂತಾಯಿಸಲಟ್ಟಿರುತ್ತದೆ. ಅದರಂತೆ ಲೆಕ್ಕ ಪರಿಶೋಧಕರ ಶಿಫಾರಸ್ಸಿನಂತೆ ಸಾಮಾನ್ಯ ಕ್ಷೇಮ ನಿಧಿ ರೂ. 2372159.00 ನೌಕರರ ಕ್ಷೇಮ ನಿಧಿ 2195422.00 ಹಾಗೂ ಅನಿರೀಕ್ಷಿತ ನಷ್ಟ ನಿಧಿ ರೂ. 13708952.00 ಗಳನ್ನು ಸಹ ಜಿಲ್ಲಾ ಮಧ್ಯವರ್ತಿ ಬ್ಯಾಂಕಿನಲ್ಲಿ ಗುಂತಾಯಿಸಲ್ಪಟ್ಟಿದೆ. ಇನ್ನುಳಿದಂತೆ ಕೆಡಿಸಿಸಿ ಬ್ಯಾಂಕ್, ವಿಕಾಸ ಅರ್ಬನ್ ಬ್ಯಾಂಕ್, ಕರ್ನಾಟಕ ಬ್ಯಾಂಕ್ ಹೆಚ್‌ಡಿಎಫ್‌ಸಿ ಬ್ಯಾಂಕ್, ದಿ ಶಿರಸಿ ಅರ್ಬನ್ ಸಹಕಾರಿ ಬ್ಯಾಂಕ್ ಹಾಗೂ ಡಿ.ಎಂ.ಸಿ. ಬ್ಯಾಂಕ್ ಇವುಗಳೆಲ್ಲಾ ರೂ. 276501000.00 ಗುಂತಾಯಿಸಲಾಗಿದ್ದು, ಠೇವಿನ ಶೇಕಡಾ 20% ರ ದೃವ್ಯಾಸ್ಥಿಯ ಬಗ್ಗೆ ರೂ. 26.22 ಕೋಟಿ ಹೊರತಾಗಿ ಉಳಿದಂತೆ ರೂ. 1.43 ಕೋಟಿಯಷ್ಟು ಹೆಚ್ಚುವರಿ ಮೊತ್ತವನ್ನು ಮೇಲ್ಕಂಡ ಬ್ಯಾಂಕುಗಳಲ್ಲಿ ಗುಂತಾಯಿಸಲಾಗಿದೆ.

**ಆಸ್ತಿಗಳು :**

ಸಹಕಾರಿ ಸಂಘದ ವರ್ಷಾಂತ್ಯದ ಒಟ್ಟೂ ಆಸ್ತಿಗಳ ಮೌಲ್ಯ 190.77 ಲಕ್ಷಗಳಷ್ಟಿದ್ದು, ಅದರಲ್ಲಿ ಯಲ್ಲಾಪುರದ ಕಟ್ಟಡ ಮತ್ತು ಜಮೀನಿನ ಮೌಲ್ಯ 138.96 ಲಕ್ಷ ಒಳಗೊಂಡಿರುತ್ತದೆ. ಕಂಪ್ಯೂಟರ್ ಫಿಟಿಂಗ್ಸ್, ವಾಹನ ಇತ್ಯಾದಿ ಎಲ್ಲಾ

ವಸ್ತುಗಳ ಮೇಲೆ ನಿಗದಿತ ಮಾನದಂಡದಂತೆ ಸವಕಳಿ ಕಳೆದಿದ್ದು, ಮಾರುಕಟ್ಟೆಯ ಮೌಲ್ಯ ಈ ಮೊತ್ತಕ್ಕಿಂತ ಎಷ್ಟೋ ಹೆಚ್ಚಿಗೆ ಇರುತ್ತದೆ.

**ಸಾಲಗಳ ವ್ಯವಹಾರ :**

| ಸಾಲಗಳು | 31-03-2023 ಕ್ಕೆ ಇದ್ದಂತೆ | | ವರ್ಷದಲ್ಲಿ ನೀಡಿದ್ದು | ವರ್ಷದಲ್ಲಿ ಜಮಾ | 31-03-2024 ಕ್ಕೆ ಇದ್ದಂತೆ | | 31-03-2024 ಕ್ಕೆ ಇದ್ದಂತೆ ಕಟಬಾಕಿ | |
|---|---|---|---|---|---|---|---|---|
| | ಸಂಖ್ಯೆ | ರಕಂ | | | ಸಂಖ್ಯೆ | ರಕಂ | ಸಂಖ್ಯೆ | ರಕಂ |
| ವಾಹನ ಸಾಲ | 946 | 897.78 | 932.31 | 534.89 | 1127 | 1295.20 | 214 | 39.92 |
| ಜಾಮೀನು ಸಾಲ | 648 | 144.50 | 149.16 | 127.58 | 649 | 166.08 | 247 | 33.70 |
| ಕ್ಯಾಶ್ ಕ್ರೆಡಿಟ್ ಸಾಲ | 86 | 2302.53 | 3887.93 | 3909.47 | 76 | 2280.99 | 9 | 537.42 |
| ಅವಧಿ ಸಾಲ | 1045 | 2528.39 | 1694.73 | 1507.15 | 1058 | 2715.97 | 355 | 309.77 |
| ಗೃಹ ನಿವೇಶನ ಸಾಲ | 23 | 766.68 | 295.33 | 141.04 | 22 | 920.98 | 4 | 13.47 |
| ಠೇವು ಸಾಲ | 260 | 314.15 | 1570.26 | 1532.51 | 279 | 351.90 | -- | -- |
| ಬಂಗಾರ ದಾಗೀನು ಸಾಲ | 662 | 327.15 | 635.77 | 593.53 | 707 | 369.39 | -- | -- |
| ಓ.ಡಿ.ಡಿ.ಎಲ್. ಸಾಲ | 35 | 147.64 | 596.65 | 594.90 | 33 | 149.39 | 1 | 5.17 |
| ಸಿಬ್ಬಂದಿ ಸಾಲ | 29 | 68.22 | 39.42 | 21.35 | 31 | 86.29 | 1 | 0.77 |
| ಅಡಮಾನ ಸಾಲ | 58 | 1602.04 | 1271.74 | 489.03 | 82 | 2384.75 | 8 | 46.75 |
| ಮಹಿಳಾ ಸಾಲ | | | 22.90 | 2.97 | 46 | 19.93 | -- | -- |
| ಅಂತೂ... | **3792** | **9099.08** | **11096.20** | **9454.42** | **4110** | **10740.87** | **839** | **986.97** |

ಈ ಪ್ರಕಾರ ವರ್ಷದ ಸಾಲಗಳ ವ್ಯವಹಾರಗಳು ಇರುತ್ತಿದ್ದು, ಸಹಕಾರಿ ಸಂಘದ ಮುಖ್ಯ ಉದ್ದೇಶವೇ ಸಾಲ ನೀಡಿಕೆಯಾದ ಕಾರಣ ಉತ್ತಮ ಸಾಲಗಾರ ಸದಸ್ಯರು ಹಾಗೂ ಪ್ರಾಮಾಣಿಕತೆಯಿಂದ ಸಾಲದ ಮರು ಪಾವತಿ ಮಾಡಿದ್ದಲ್ಲಿ ಮಾತ್ರ ಸಹಕಾರಿ ಸಂಘದ ಪ್ರಗತಿಗೆ ಮೂಲ ಕಾರಣವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಪಡೆದ ಸಾಲವು ಸಕಾಲದಲ್ಲಿ ತಿರಿಸುವುದಲ್ಲದೇ ಹೊಸ ಹೊಸ ಸಾಲ ಪಡೆದು ತಮ್ಮ ಆರ್ಥಿಕ ಅಭಿವೃದ್ಧಿ ಸಾಧಿಸಿಕೊಳ್ಳಲು ಸಾಲಗಾರ ಸದಸ್ಯರಲ್ಲಿ ಕಳಕಳಿಯಿಂದ ವಿನಂತಿಸುತ್ತೇವೆ.

ವರದಿಯ ವರ್ಷ ಸಾಲದ ವ್ಯವಹಾರದಲ್ಲಿ ಒಟ್ಟು 4110 ಸದಸ್ಯರಿಂದ 107.41 ಕೋಟಿಯಷ್ಟು ಬರತಕ್ಕ ಸಾಲವಾಗಿದ್ದು, ಇದರಲ್ಲಿ 839 ಜನರಿಂದ 986.97 ಲಕ್ಷ ಕಟಬಾಕಿ ಸಾಲ ಆಗಿರುತ್ತದೆ. ಮಿತವಾದ ಆರ್ಥಿಕ ಹಿನ್ನೆಲೆಯುಳ್ಳ ನಮ್ಮ ಸಂಸ್ಥೆಗೆ ಈ ಕಟಬಾಕಿ ಪ್ರಮಾಣವು ದೊಡ್ಡ ಹೊರೆಯೇ ಆಗುತ್ತದೆ. ಕಟಬಾಕಿ ಸಾಲದ ಶೇಕಡಾ ಪ್ರಮಾಣವು ಸಾಲಗಳ ಬಾಕಿಯ ಮೇಲೆ ಶೇಕಡಾ 9.19% ಗಳಷ್ಟು ಆಗುತ್ತಿದ್ದು, ವಸೂಲಾತಿಯ ಪ್ರಮಾಣ ಶೇಕಡಾ 90.81% ರಷ್ಟು ಆಗಿರುತ್ತದೆ.

**ಕಟ್ಟಬಾಕಿ ಸಾಲಗಳ ಮೇಲೆ ಕೈಗೊಂಡ ಕ್ರಮಗಳ ವಿವರ : ((ರೂ. ಲಕ್ಷಗಳಲ್ಲಿ)**

| ಕೈಗೊಂಡ ಕ್ರಮ | ಸಂಖ್ಯೆ | ರಕಂ |
|---|---|---|
| ಅಮಲಜಾರಿಯಲ್ಲಿ | 137 | 205.28 |
| ಪಂಚಾಯತ ದಾವಾದಲ್ಲಿ | 54 | 594.05 |
| ಚೆಕ್‌ಬೌನ್ಸ | 13 | 4.72 |

| ಕೈಗೊಂಡ ಕ್ರಮ | ಸಂಖ್ಯೆ | ರಕಂ |
|---|---|---|
| ನೋಟೀಸು ಕೊಟ್ಟಿದ್ದು | 635 | 182.92 |
| ಅಂತೂ... | **839** | **986.97** |

ಈ ಪ್ರಕಾರ ಕಟಬಾಕಿ ಸಾಲಗಳು ಇರುತ್ತಿದ್ದು, ಸಂಯುಕ್ತ ಸಹಕಾರಿಯ ನ್ಯಾಯಾಲಯದಲ್ಲಿ ದಾವಾ ಪ್ರಕರಣ ದಾಖಲಿಸುವ ಪ್ರಕ್ರಿಯೆಯಿಂದ ವಸೂಲಾತಿಯ ಕ್ರಮ ತೀವ್ರವಾಗಿ ಆಗುತ್ತಲಿದೆ. ಆದರೆ ನಾವು ಸಾಲಗಾರ ಸದಸ್ಯರನ್ನು ಸಾಧ್ಯವಾದಷ್ಟು ಮನವಲಿಸಿ ಸಾಲದ ಮರುಪಾವತಿಗಾಗಿ ಪ್ರಯತ್ನಿಸುತ್ತಾ ಇದ್ದು, ಅನಿವಾರ್ಯ ಸಂದರ್ಭಗಳಲ್ಲಿ ಮಾತ್ರ ಕಾನೂನು ಕ್ರಮ ಕೈಗೊಳ್ಳುವುದು ಅನಿವಾರ್ಯವಾಗುತ್ತಿದೆ. ಮುಂದಿನ ದಿನಗಳಲ್ಲಿ ಸಾಲ ಪಡೆದ ಸದಸ್ಯರು ನಮ್ಮೊಂದಿಗೆ ಸ್ನೇಹಮಯ ವಾತಾವರಣದಲ್ಲಿ ಸಾಲ ತಿರಿಸುವ ಪ್ರಕ್ರಿಯೆಗಳಿಗೆ ಅವಕಾಶ ನೀಡಿದಲ್ಲಿ ಪರಸ್ಪರ ಪ್ರಗತಿಗೆ ಸಹಾಯಕವಾಗಬಹುದೆಂದು ನಂಬಿರುತ್ತೇವೆ.

**ಅನುತ್ಪಾದಕ ಆಸ್ತಿಗಳು (ಎನ್ ಪಿ ಎ) :**

ವರದಿಯ ವರ್ಷ ಸಹಕಾರಿ ಸಂಘದ ಎನ್ ಪಿ ಎ ಪ್ರಮಾಣವು ಕಡಮೆ ಆಗಿರುತ್ತಿದ್ದು, ಬರತಕ್ಕ ಸಾಲಗಳ ಮೇಲೆ ಭಾರತಿಯ ರಿಸರ್ವ ಬ್ಯಾಂಕ್ ನಿಯಮದಂತೆ ಲೆಕ್ಕ ಮಾಡಿದಾಗ ನಮ್ಮ ಸಹಕಾರಿ ಸಂಘದ ಅನುತ್ಪಾದಕ ಆಸ್ತಿಯ ಪ್ರಮಾಣವು ಸಾಲದ ಶೇಕಡಾ 7.82 ರಷ್ಟು ಆಗುತ್ತದೆ. ಇದರಿಂದ ನಮ್ಮ ಸಂಸ್ಥೆಯ ನಿಜವಾದ ಆರ್ಥಿಕ ಮಾನದಂಡವನ್ನು ಅವಲೋಕಿಸಲು ಅನುಕೂಲವಾಗಿದೆ ಎಂದು ಭಾವಿಸಿದ್ದೇವೆ. ಅನುತ್ಪಾದಕ ಆಸ್ತಿಯ ಪ್ರಮಾಣವನ್ನು ನಮ್ಮ ಸಹಕಾರಿಯ ಭಾರತಿಯ ರಿಸರ್ವ ಬ್ಯಾಂಕ್ ನಿಯಮದ ಅನ್ವಯ ಲೆಕ್ಕ ಹಾಕಲಾಗುತ್ತಿದ್ದು, ಸಂಸ್ಥೆಯ ನಿಜವಾದ ಆರ್ಥಿಕ ಮಾನದಂಡವನ್ನು ಅವಲೋಕಿಸಲು ಅನುಕೂಲವಾಗಿದೆ ಎಂದು ಭಾವಿಸಿದ್ದು, ಮುಂದಿನ ವರ್ಷಗಳಲ್ಲಿ ನಾವು ಅನುತ್ಪಾದಕ ಆಸ್ತಿಗಳಿಗೆ ಸಂಬಂಧಿಸಿದಂತೆ ಸಾಕಷ್ಟು ನಿಧಿಗಳನ್ನು ಇಡುವುದಲ್ಲದೇ ಶೇಕಡಾ 0% ಮಟ್ಟಕ್ಕೆ ಎನ್‌ಪಿಎ ಇಳಿಸಲು ನಮ್ಮ ಆಡಳಿತ ಮಂಡಳಿಯು ದೃಢವಾದ ಹೆಜ್ಜೆ ಇಟ್ಟಿದೆ.

**ಇತರ ಬರತಕ್ಕ ಬಾಬ್ತುಗಳು :**

ವರ್ಷಾಂತ್ಯಕ್ಕೆ ಇತರ ಬರತಕ್ಕ ಬಾಬ್ತುಗಳಲ್ಲಿ ರೂ. 124.84 ಲಕ್ಷ ಇರುತ್ತಿದ್ದು, ಇದರಲ್ಲಿ ಬ್ಯಾಂಕಿನಿಂದ ಬರತಕ್ಕ ಬಡ್ಡಿ ರೂ. 48.67 ಲಕ್ಷ, ಸ್ಟಾಂಪ್ ಪೇಪರ ಭದ್ರತಾ ಠೇವು ರೂ. 2 ಲಕ್ಷ, ಹೀಗೆ ವಿವಿಧ ಖಾತೆಯಲ್ಲಿ ಬರತಕ್ಕದಿದ್ದು, ಬರತಕ್ಕ ಎಲ್ಲಾ ರಕಂಗಳನ್ನು ಸೂಕ್ತ ಆಧಾರ ಹೊಂದಿದ ಖಾತೆಗಳಾಗಿರುತ್ತದೆ.

**ಸಭೆಗಳು :**

ವರದಿಯ ವರ್ಷ ದಿನಾಂಕ 25-9-2023 ರಂದು ಒಂದು ವಾರ್ಷಿಕ ಸರ್ವ ಸಾಧಾರಣ ಸಭೆ, ಆಡಳಿತ ಮಂಡಳಿಯ ಸಭೆಗಳು 07, ಕಾರ್ಯಕಾರಿ ಮಂಡಳಿಯ ಸಭೆಗಳು ಮತ್ತು ರಿಕವರಿ ವಸೂಲಾತಿ ಸಮಿತಿಯ 05 ಸಭೆಗಳು ಜರುಗಿದ್ದು, ಕಾಲ ಕಾಲಕ್ಕೆ ಆಡಳಿತಾತ್ಮಕವಾದ ಮತ್ತು ಕಾನೂನು ಬದ್ಧವಾದ ನಿರ್ಣಯಗಳನ್ನು ಕೈಗೊಂಡಿದ್ದು, ಸಹಕಾರಿಯ ಪ್ರಗತಿಗೆ ತನ್ನದೆ ಆದ ಕೊಡುಗೆ ನೀಡಿದೆ ಎಂದು ತಿಳಿಸಲು ಹರ್ಷವೆನಿಸುತ್ತದೆ. ಸಹಕಾರ ನೀಡಿದ ಎಲ್ಲಾ ನಿರ್ದೇಶಕರನ್ನು, ಆಹ್ವಾನಿತರನ್ನು, ಮಾರ್ಗದರ್ಶಕ ಸಲಹೆಗಾರರನ್ನು, ಗೌರವ ಪೂರಕವಾದ ಅಭಿನಂದಿಸುತ್ತೇವೆ

**ಸಿಬ್ಬಂದಿಗಳು :**

ನಮ್ಮ ಸಹಕಾರಿ ಸಂಘದಲ್ಲಿ ವರದಿ ವರ್ಷದ ಅಂತ್ಯಕ್ಕೆ ಇದ್ದಂತೆ ಒಟ್ಟು 50 ಜನ ಖಾಯಂ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಲಿದ್ದು, 3 ಸಿಬ್ಬಂದಿ ತಾತ್ಕಾಲಿಕ ತಳಹದಿಯ ಮೇಲೆ ಕೆಲಸ ನಿರ್ವಹಿಸುತ್ತಿದ್ದಾರೆ. ಅದರಂತೆ 6 ತಿಂಗಳ ಅಂಚೆ ತರೆವಿನ ಶಿಕ್ಷಣ ಕೊರ್ಸನ್ನು ಕರ್ನಾಟಕ ಸಹಕಾರ ಯೂನಿಯನ್‌ನವರು ನಡೆಸುತ್ತಲಿದ್ದು, ಈ ಕೋರ್ಸನ್ನು ಮುಗಿಸಲು ನಮ್ಮ ಸಿಬ್ಬಂದಿಗಳಿಗೆ ಸೂಚಿಸಲಾಗಿರುತ್ತದೆ. ಈ ಕೋರ್ಸನ್ನು ಮುಗಿಸಿದ್ದಲ್ಲಿ ಸೇವಾ ಅವಧಿಯ ಮುಂಬಡ್ತಿ ಹಾಗೂ ಇನ್ನಿತರ

ಅರ್ಹತೆಗಳಿಗೆ ಪರಿಗಣಿಸಲು ತಿರ್ಮಾನಿಸಲಾಗಿದೆ. ಅದರಿಂದ ತರಬೇತಿ ಹೊಂದಿದ ಸಿಬ್ಬಂದಿಗಳಿಂದ ಪ್ರಗತಿಗೆ ಪೂರಕವಾಗಬಹುದೆಂದು ಭಾವಿಸಲಾಗಿದೆ.

**ಸಲಹೆಗಾರರು ಮತ್ತು ಮಾರ್ಗದರ್ಶಕರು :**

ಸಂಘದ ಸಲಹೆಗಾರರಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ. ಪಿ. ಜಿ. ಹೆಗಡೆ ಇವರಿಗೂ ಹಾಗೂ ಕಾಲಕಾಲಕ್ಕೆ ಕಾನೂನು ಸಲಹೆಗಳನ್ನು ನೀಡುತ್ತಿರುವ ಎಲ್ಲ ಕಾನೂನು ಸಲಹೆಗಾರರಿಗೂ ಸಹಿತ ನಮ್ಮ ಹಾರ್ದಿಕ ಕೃತಜ್ಞತೆಗಳು ಮತ್ತು ಅವರುಗಳ ಸೇವೆಯನ್ನು ಇನ್ನು ಮುಂದೆಯೂ ಬಯಸುತ್ತೇವೆ ಅಲ್ಲದೆ ಅವಶ್ಯವಿದ್ದಾಗ ನಮಗೆ ಅನೇಕ ಕ್ಲಿಷ್ಟಕರ ಸಮಯದಲ್ಲಿ ಮಾರ್ಗದರ್ಶನ ನೀಡುತ್ತಿರುವ ಶ್ರೀ ಎಸ್.ಪಿ. ಶೆಟ್ಟಿ ನಿವೃತ್ತ ವ್ಯವಸ್ಥಾಪಕ ನಿರ್ದೇಶಕರು ಕೆ.ಡಿ.ಸಿ.ಸಿ. ಬ್ಯಾಂಕ್ ಲಿ., ಶಿರಸಿ ಇವರಿಗೂ ಧನ್ಯವಾದಗಳು.

**ಲಾಭ ಹಾನಿ :**

ವರದಿ ವರ್ಷ ವ್ಯವಹಾರಿಕ ಲಾಭ ರೂ. 148.47 ಲಕ್ಷ ಇದ್ದು, 109.67 ಲಕ್ಷ ನಿಕ್ಕಿ ಲಾಭಗಳಿಸಿದೆ. ಮುಂದಿನ ದಿನಗಳಲ್ಲಿ ವ್ಯವಹಾರಗಳನ್ನು ಹೆಚ್ಚಳ ಮಾಡುವ ಹಾಗೂ ಖರ್ಚು ವೆಚ್ಚಗಳನ್ನು ನಿಯಂತ್ರಣದಲ್ಲಿಡುವ ಮೂಲಕ ಆರ್ಥಿಕ ಪ್ರಗತಿ ಕುಂಠಿತಗೊಳ್ಳದಂತೆ ನೋಡಿಕೊಳ್ಳಲು ನಮ್ಮ ಆಡಳಿತ ಮಂಡಳಿ ಹಾಗೂ ಸಿಬ್ಬಂದಿ ವರ್ಗ ಕಟಿಬದ್ಧವಾಗಿದೆ ಎಂದು ತಿಳಿಸಬಯಸುತ್ತೇವೆ.

ವರ್ಷಾಂತ್ಯದ ಲಾಭವನ್ನು ಈ ಕೆಳಕಂಡ ರೀತಿಯಲ್ಲಿ ವಿನಿಯೋಗಿಸಲು ಆಡಳಿತ ಮಂಡಳಿಯು ಮಹಾಸಭೆಗೆ ಶಿಫಾರಸ್ಸು ಮಾಡಿದೆ.

| ವಿವರ | ರಕಂ |
|---|---|
| ರಿಜರ್ವ ಫಂಡ (25%) | 27,42,000.00 |
| ಸಹಕಾರಿ ಶಿಕ್ಷಣ ನಿಧಿ (2%) | 2,19,360.00 |
| ಅನಿರೀಕ್ಷಿತ ನಷ್ಟ ನಿಧಿ (20%) | 21,93,600.00 |
| ಸಾಮಾನ್ಯ ಕ್ಷೇಮ ನಿಧಿ (5%) | 5,48,400.00 |
| ಸದಸ್ಯರ ಶೇರು ಡಿವಿಡೆಂಡ್ (8%) | 51,14,640.00 |
| ಧರ್ಮಾರ್ಥ ವ ಪ್ರಚಾರ ನಿಧಿ | 1,48,833.00 |
| **ಅಂತೂ...** | **1,09,66,833.00** |

ಈ ಪ್ರಕಾರ ಲಾಭ ವಿಭಾಗಣೆ ಮಾಡಿದ್ದು, ಅನುಮೋದನೆಗಾಗಿ ಮಹಾಸಭೆಗೆ ಸಾದರಪಡಿಸಿದೆ.

**ಲೆಕ್ಕಪರಿಶೋಧನೆ :**

2023–24 ನೇ ಸಾಲಿನ ಅಧಿಕೃತ ಲೆಕ್ಕಪರಿಶೋಧನೆಯನ್ನು ಶ್ರೀ ಐ. ಪಿ. ವರೂರ & ಕಂಪನಿ ಹುಬ್ಬಳ್ಳಿ ಇವರು ಮಾಡಿ ಸೂಕ್ತ ವಿವರಣೆಯೊಂದಿಗೆ ಪ್ರಗತಿಗೆ ಪೂರಕವಾದ ಸಲಹೆ ಸೂಚನೆಗಳ ಸಹಿತ ಲೆಕ್ಕಪರಿಶೋಧನಾ ವರದಿಯನ್ನು ಸಲ್ಲಿಸಿರುತ್ತಾರೆ. ವರದಿಗೆ ಆಡಳಿತ ಮಂಡಳಿಯ ಸೂಕ್ತವಾದ ಅನುಪಾಲನಾ ವರದಿಯನ್ನು ತಯಾರಿಸಿ ಸಂಬಂಧಿಸಿದವರಿಗೆ

ಕಳುಹಿಸಲಾಗಿದೆ.

ವರದಿಯ ವರ್ಷ ಸಹಕಾರಿಯ ವಸೂಲಾತಿಯ ಶೇಕಡಾ ಪ್ರಮಾಣವು 90.81 ಆದ ಕಾರಣ ಸಹಕಾರಿಯನ್ನು ಲೆಕ್ಕಪರಿಶೋಧಕರು 'ಬ' ವರ್ಗದಲ್ಲಿ ವಿಂಗಡಿಸಿರುತ್ತಾರೆ. ಮುಂದಿನ ದಿನಗಳಲ್ಲಿ ವಸೂಲಾತಿಯ ಪ್ರಮಾವು ನಿಗಧಿತ ಶೇಕಡಾ 95% ಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಆಗುವ ರೀತಿಯಲ್ಲಿ ಈಗಿನಿಂದಲೇ ಕಾರ್ಯ ಪ್ರವೃತ್ತರಾಗಿ ಯೋಜಿತ ರೀತಿಯಲ್ಲಿ ಯೋಜನಾ ಬದ್ಧವಾಗಿ ವಸೂಲಾತಿ ಕ್ರಮ ಕೈಗೊಳ್ಳಲು ಸಿಬ್ಬಂದಿ ಹಾಗೂ ಸಂಬಂಧಪಟ್ಟವರಿಗೆ ಸ್ಪಷ್ಟವಾಗಿ ಸೂಚಿಸಲಾಗಿದ್ದು, ಮುಂದಿನ ದಿನಗಳಲ್ಲಿ ಸಹಕಾರಿಯನ್ನು 'ಎ' ವರ್ಗದಲ್ಲಿ ಬರುವಂತೆ ಮಾಡಲು ಶ್ರಮ ವಹಿಸಲಾಗುವುದು.

ವರದಿಯ ವರ್ಷ ಆದಾಯಕರ ಹಾಗೂ ಇನ್ನಿತರ ಕರ ವ್ಯವಹಾಗಳಿಗೆ ಸಂಬಂಧಿಸಿದಂತೆ ಹಾಗೂ ಸಕಾಲದಲ್ಲಿ ಸೂಕ್ತ ಲೆಕ್ಕಪತ್ರಗಳನ್ನು ಇಲಾಖೆಗಳಿಗೆ ಸಾದರ ಪಡಿಸಲು ಮಾರ್ಗದರ್ಶನ ನೀಡಿದ ಹಾಗೂ ಸಹಕಾರಿಯ ಅಧಿಕೃತ ಲೆಕ್ಕಪರಿಶೋಧನೆ ಮಾಡಿ ವರದಿ ಸಲ್ಲಿಸಿದ ಶ್ರೀ ಐ. ಪಿ. ವರೂರ & ಕಂಪನಿ ಹುಬ್ಬಳ್ಳಿ ಇವರಿಗೆ ಮತ್ತು ಟಿ.ಡಿ.ಎಸ್.ಗೆ ಸಂಬಂಧಿಸಿದ ಸಲಹೆ ನೀಡುತ್ತಿರುವ ಗಾಂವ್ಕರ ಅಸೋಸಿಯೆಟ್ಸ್ ಇವರಿಗೂ ಹಾರ್ದಿಕ ಅಭಿನಂದನೆಗಳು.

## ಸದಸ್ಯರ ಸೇವೆಯಲ್ಲಿ ತಂತ್ರಜ್ಞಾನದ ಅಳವಡಿಕೆ :

ನಮ್ಮ ಸಹಕಾರಿ ಸಂಘವು ತನ್ನ ಆಡಳಿತ ಹಾಗೂ ಲೆಕ್ಕ ಪರಿಶೋಧನೆಯಲ್ಲಿ ಹೊಸ ತಾಂತ್ರಿಕತೆಯನ್ನು ಅಳವಡಿಸಿಕೊಂಡಿದ್ದು, ಈಗಾಗಲೇ ಇರುವ ಸೇವೆಗಳ ಹೊರತಾಗಿ ಅಂತರ ಶಾಖೆಯ ಆನ್ ಲೈನ್ ವ್ಯವಸ್ಥೆ, ಖಾತೆಗಳ ಮೆಸೆಜಿಂಗ್ ವ್ಯವಸ್ಥೆ ಕಾಗದ ರಹಿತ ಸೇವೆಗಳತ್ತ ಮುಂದುವರೆಯುವಿಕೆ ಇತ್ಯಾದಿ ತಾಂತ್ರಿಕ ಕಂಪ್ಯೂಟರಿಕೃತ ವ್ಯವಸ್ಥೆಯನ್ನು ಮಂಗಳೂರಿನ ಮೆ. ಆಟೋಮೆಶನ್ ಇನ್ಫೋ ಸೊಲ್ಯೂಶನ್ ಪ್ರೈ.ಲಿ. ಮಂಗಳೂರು ಇವರ ಸಹಯೋಗದೊಂದಿಗೆ ಕೇಂದ್ರ ಕಛೇರಿ ಹಾಗೂ ಎಲ್ಲಾ ಶಾಖೆಗಳಲ್ಲಿ ಅಳವಡಿಸಿಕೊಳ್ಳಲಾಗಿದ್ದು, ಈ ಬಗ್ಗೆ ಸಿಬ್ಬಂದಿಗಳಿಗೂ ಕೂಡಾ ಸಾಕಷ್ಟು ತರಬೇತಿ ನೀಡಲಾಗಿದೆ. ಇದರಿಂದ ಗ್ರಾಹಕರು ತಮ್ಮ ವ್ಯವಹಾರಗಳನ್ನು ಪಾರದರ್ಶಕವಾಗಿ ನೋಡಿಕೊಳ್ಳಲು ಹಾಗೂ ಕ್ಷಿಪ್ರ ಸೇವೆ ಪಡೆಯಲು ಹೆಚ್ಚಿನ ಅನೂಕೂಲವಾಗುವುದಲ್ಲದೇ ಆಧುನಿಕ ಸೇವೆ ನೀಡುವಲ್ಲಿ ನಮ್ಮ ಸಂಸ್ಥೆಯು ಕೂಡಾ ಮುಂಚೂಣಿಯಲ್ಲಿದೆ ಎಂದು ಹೆಮ್ಮೆಯಿಂದ ಹೇಳಲು ಅಭಿಮಾನ ಎನಿಸುತ್ತದೆ

ಇದರ ಹೊರತಾಗಿ ಸಂಸ್ಥೆಯು ತನ್ನ ಎಲ್ಲಾ ಚಟುವಟಿಕೆಗಳನ್ನು ಪ್ರಚಾರಪಡಿಸುವ ಉದ್ದೇಶದಿಂದ ವೆಬ್ ಸೈಟ್ ಹೊಂದಿದ್ದು ನಮ್ಮ ವೆಬ್ ಸೈಟ್ uksouharda.com ಇರುತ್ತದೆ. ಇದರಿಂದ ಸಂಸ್ಥೆಯು ನೀಡುವ ಸೇವೆಗಳ ಜೊತೆಗೆ ಸದಸ್ಯರಿಗೆ ಅಗತ್ಯ ಮಾಹಿತಿ ನೀಡಲಿಕ್ಕೂ ಪ್ರವಾಸೋದ್ದಿಮೆ ಹಾಗೂ ಇನ್ನಿತರ ಹೊಸ ವ್ಯವಹಾರಗಳಲ್ಲಿ ತೊಡಗಿಸಿಕೊಳ್ಳಲಿಕ್ಕೂ ಅನುಕೂಲವಾಗುತ್ತದೆ ಎಂದು ಭಾವಿಸುತ್ತೇವೆ.

## ಶಾಖೆಗಳು :

ಸಹಕಾರಿ ಸಂಘವು ಪ್ರಧಾನ ಕಛೇರಿಯನ್ನೊಳಗೊಂಡು ಒಟ್ಟೂ 11 ಶಾಖೆಗಳನ್ನು ಹೊಂದಿದೆ.

## ಮುಂದಿನ ಧ್ಯೇಯ ಧೋರಣೆಗಳು :

ನಮ್ಮ ಸಹಕಾರಿ ಸಂಘವು ವರ್ಷಾನು ವರ್ಷ ಪ್ರಗತಿಯ ಪಥದಲ್ಲಿ ದಾಪುಗಾಲು ಇಡುತ್ತಿದ್ದು, ಮಹಾ ಸಭೆಯಿಂದ ಸೂಚಿಸಲ್ಪಟ್ಟ ಸಲಹೆ ಸೂಚನೆಗಳ ಅನ್ವಯ ಹೊಸ ಹೊಸ ಯೋಜನೆಗಳ ಬಗ್ಗೆ ದೂರದೃಷ್ಟಿಯನ್ನು ಹೊಂದಿದ್ದು ಅದರನ್ವಯ

ಬೇರೆ ಬೇರೆ ವಿಮಾ ಕಂಪನಿಗಳೊಂದಿಗೆ ಒಪ್ಪಂದ ಮಾಡಿಕೊಂಡು ಇತರೆ ಆದಾಯದ ಕ್ರೋಢೀಕರಣಕ್ಕಾಗಿ ಹೆಚ್ಚಿನ ಆಸಕ್ತಿ ವಹಿಸಿ ಅವಿರತವಾಗಿ ಕೆಲಸ ನಿರ್ವಹಿಸುವ ಗುರಿ ಹೊಂದಲಾಗಿದೆ, ಹಾಗೂ ಈ ಆರ್ಥಿಕ ವರ್ಷದಲ್ಲಿ ವಿಮಾ ಸೇವೆಗಳನ್ನು ಸಂಘದ ಸದಸ್ಯರಿಗೊಂದೇ ಸೀಮಿತವಾಗಿಡದೇ ಜಿಲ್ಲಾದ್ಯಂತ ಇರುವ ಎಲ್ಲಾ ಸಹಕಾರಿ ಸಂಘಗಳ ಸಹಯೋಗದೊಂದಿಗೆ ಅವರ ಸದಸ್ಯರುಗಳಿಗೆ ಮತ್ತು ಸಂಘ ಸಂಸ್ಥೆಗಳಿಗೂ ಸಹ ವಿಮಾ ಮತ್ತು ಇತರ ಸೇವೆಗಳನ್ನು ಒದಗಿಸಲು ಸೂಕ್ತ ಯೋಜನೆಗಳನ್ನು ರೂಪಿಸಿದ್ದು ಅದರಂತೆಯೇ ಗುರಿತಲುಪುವತ್ತ ಕಾರ್ಯ ಪ್ರವೃತ್ತರಾಗಲು ತೀರ್ಮಾನಿಸಿದ್ದೇವೆ.

ಸಂಘದಲ್ಲಿ ಈಗಾಗಲೇ ಹೆಚ್ಚುವರಿಯಾಗಿ ಇರುವ ರಕಂ ನ್ನು ಕಾಲಕಾಲಕ್ಕೆ ಆರ್ಥಿಕ ತಜ್ಞರ ಸಲಹೆ ಸೂಚನೆಗಳನ್ನು ಪಡೆದು ಹೆಚ್ಚಿನ ಆದಾಯ ಹಾಗೂ ಭದ್ರತೆಯಿರುವ ಗುಂತಾವಣೆಗಳಲ್ಲಿ ಗುಂತಾಯಿಸಲು ತೀರ್ಮಾನಿಸಿದೆ ಮತ್ತು ಸಹಕಾರಿ ಸಂಘದ ಕಟಬಾಕಿ ಪ್ರಮಾಣವನ್ನು ಆದಷ್ಟು ಸಾಲಗಾರರ ಮನವೊಲಿಸಿ ಸಾಲ ವಸೂಲಿ ಪಡೆಯುತ್ತಿದ್ದು ಅನಿವಾರ್ಯ ಸಂದರ್ಭಗಳಲ್ಲಿ  ಮಾತ್ರ ಕಾನೂನು ಕ್ರಮ ಜರುಗಿಸಿ ಸಾಲ ವಸೂಲಿ ಪಡೆದು ಎನ್.ಪಿ.ಎ ಪ್ರಮಾಣವನ್ನು ಕಡಿಮೆ ಮಟ್ಟಕ್ಕೆ ಇಳಿಸುವ ಸ್ಪಷ್ಟವಾದ ನಿರ್ಧಾರದೊಂದಿಗೆ ಕಾರ್ಯಪ್ರವೃತ್ತರಾಗಿರುತ್ತೇವೆ.

ಶ್ರದ್ಧಾಂಜಲಿ :

ವರದಿ ವರ್ಷದಲ್ಲಿ ನಮ್ಮನ್ನು ಅಗಲಿದ ಅನೇಕ ಸದಸ್ಯರುಗಳಿಗೆ ಸಂತಾಪ ಸೂಚಿಸುತ್ತಾ, ಅವರೆಲ್ಲರ ಆತ್ಮಕ್ಕೆ ಚಿರಶಾಂತಿ ನೀಡುವಂತೆ ದೇವರಲ್ಲಿ ಪ್ರಾರ್ಥಿಸುತ್ತೇವೆ.

## ಮಹತ್ವದ ಸೂಚನೆಗಳು

01. ಕರ್ನಾಟಕ ಸೌಹಾರ್ದ ಕಾಯ್ದೆಯನ್ವಯ ಮಹಾಸಭೆಗೆ ಹಾಜರಾಗುವುದು ಹಾಗೂ ಸಹಕಾರಿ ಸಂಘದ ಬೈಲಾದಲ್ಲಿ ಸೂಚಿಸಿದ ಕನಿಷ್ಠ ವ್ಯವಹಾರ ಮಾಡುವುದು ಕಡ್ಡಾಯವಾಗಿದ್ದು, ಕನಿಷ್ಠ ವ್ಯವಹಾರ ಮಾಡದೇ ಹೋದಲ್ಲಿ ಸಹಕಾರಿ ಸಂಘದ ಸದಸ್ಯತ್ವದ ಅಧಿಕಾರ ಚಲಾಯಿಸಲು ಮತದಾನದಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ.
02. ಡಿವಿಡೆಂಡ ಪಡೆಯದೇ ಇದ್ದವರು ಡಿವಿಡೆಂಡ ಒಯ್ಯಬೇಕು. ಮೂರು ವರ್ಷಕ್ಕಿಂತ ಹೆಚ್ಚಿನ ಅವಧಿಯ ಡಿವಿಡೆಂಡ ಒಯ್ಯದೇ ಹೋದಲ್ಲಿ ಅಂತಹ ಮೊತ್ತವನ್ನು ಸಹಕಾರಿ ಸಂಘದ ರಿಸರ್ವಫಂಡಿಗೆ ವರ್ಗಾಯಿಸಲಾಗುವುದು.
03. ಸಹಕಾರಿ ಸಂಘದ 2023–24 ನೇ ಸಾಲಿನ ವಾರ್ಷಿಕ ವರದಿ ಮತ್ತು ಅಢಾವೆ ಪತ್ರಿಕೆಗಳು ಪ್ರಧಾನ ಕಛೇರಿಯಲ್ಲಿ ನೋಟಿಸ್ ಬೋರ್ಡಿಗೆ ಅಂಟಿಸಲಾಗಿದೆ.
04. ಶೇರು ಖಾತೆಗೆ ಅಥವಾ ಯಾವುದೇ ಖಾತೆಗೆ ನಾಮಿನಿ ಮಾಡದೇ ಇದ್ದವರು ನಾಮಿನಿ ದಾಖಲಿಸಬೇಕು.
05. ಸಹಕಾರಿ ಸಂಘದ ಸದಸ್ಯತ್ವ ಗುರುತಿನ ಚೀಟಿ ಪಡೆಯುವುದು ಕಡ್ಡಾಯವಿದ್ದು ಪಡೆಯಲು ವಿನಂತಿಸಿದೆ. ಹಾಗೂ ಗುರುತಿನ ಚೀಟಿ ಹೊಂದದೇ ಹೋದಲ್ಲಿ ಯಾವುದೇ ರೀತಿಯ ಮತದಾನದಲ್ಲಿ ಭಾಗವಹಿಸಲಿಕ್ಕೆ ಅವಕಾಶವಿರುವುದಿಲ್ಲ.
06. ಸಂಘದ ವ್ಯವಹಾರಗಳ ಬಗ್ಗೆ ಅಥವಾ ಅಥವಾ ಯಾವುದೇ ವಿಷಯಗಳ ಬಗ್ಗೆ ಪ್ರಶ್ನೆ ಕೇಳಬಯಸುವವರು ಮಹಾ ಸಭೆಗೆ 03 ದಿನ ಮುಂಚಿತವಾಗಿ ಸೂಚನಾ ಪತ್ರವನ್ನು ಕಳುಹಿಸಲು ವಿನಂತಿಸಿದೆ.

# ಕೃತಜ್ಞತೆಗಳು

2023–24 ನೇ ಸಾಲಿನ ಸಹಕಾರಿ ಸಂಘದ ಕಾರ್ಯಚಟುವಟಿಕೆಗಳು ಆರ್ಥಿಕ ವ್ಯವಹಾರಗಳ ಪರಿಣಾಮ ಮುಂದಿನ ದಿಕ್ಸೂಚಿ ಇತ್ಯಾದಿಗಳ ಕುರಿತು ಆಮೂಲಾಗ್ರವಾದ ಟಿಪ್ಪಣಿಯೊಂದಿಗೆ ಪಾರದರ್ಶಕವಾಗಿ ಈ ವರದಿಯನ್ನು ಸಾದರಪಡಿಸಿದ್ದು, ನಮ್ಮ ಸಂಘದ ಕಾರ್ಯ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಹೆಚ್ಚಿನ ಪ್ರೋತ್ಸಾಹ ನೀಡುತ್ತಿರುವ ಎಲ್ಲರನ್ನು ಸ್ಮರಿಸುವುದು ನಮ್ಮ ಕರ್ತವ್ಯದ ಪ್ರಮುಖ ಭಾಗವಾಗಿದೆ ಎಂದು ಭಾವಿಸಿದ್ದೇನೆ.

ಸಂಸ್ಥೆಯ ವಿವಿಧ ಸೇವೆಯನ್ನು ಪಡೆಯುತ್ತಿರುವ ಎಲ್ಲ ವರ್ಗದ ಗ್ರಾಹಕರ ಬಂಧುಗಳನ್ನು ನಮ್ಮ ಮೇಲಿನ ನಂಬಿಕೆಯಿಂದ ತಮ್ಮ ಉಳಿತಾಯದ ಹಣವನ್ನು ನಮ್ಮಲ್ಲಿ ಠೇವಣಿ ಮಾಡಿರುವ ಎಲ್ಲ ಠೇವಣಿದಾರರನ್ನು ತಮ್ಮ ಆರ್ಥಿಕ ಚಟುವಟಿಕೆಗಳಿಗೆ ನಮ್ಮಿಂದ ಸಾಲದ ರೂಪದಲ್ಲಿ ಹಣ ಪಡೆದು ತಮ್ಮ ವ್ಯವಹಾರಗಳನ್ನು ಅಭಿವೃದ್ಧಿಪಡಿಸಿಕೊಳ್ಳುತ್ತಿರುವ ಹಾಗೂ ಸಕಾಲಕ್ಕೆ ಮರುಪಾವತಿ ಮಾಡುತ್ತಿರುವ ಎಲ್ಲಾ ಗೌರವಾನ್ವಿತ ಗ್ರಾಹಕ ಬಂಧುಗಳನ್ನು ಈ ಸಂದರ್ಭದಲ್ಲಿ ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.

ನಮ್ಮ ಆರ್ಥಿಕ ಚಟುವಟಿಕೆಗಳಿಗೆ ಭದ್ರ ಬುನಾದಿ ನೀಡಲು ನೇರವಾಗುತ್ತಿರುವ ಜಿಲ್ಲಾ ಮಧ್ಯವರ್ತಿ ಬ್ಯಾಂಕುಗಳಲ್ಲಿನ ಎಲ್ಲಾ ಪಧಾದಿಕಾರಿಗಳನ್ನು ವಾಣಿಜ್ಯ ಮತ್ತು ಸಹಕಾರಿ ಬ್ಯಾಂಕುಗಳ ಪದಾಧಿಕಾರಿಗಳನ್ನು ಆತ್ಮೀಯವಾಗಿ ಸ್ಮರಿಸುತ್ತೇನೆ.

ಉತ್ತರಕನ್ನಡ ಜಿಲ್ಲಾ ಮಧ್ಯವರ್ತಿ ಸಹಕಾರಿ ಬ್ಯಾಂಕ್ ಶಿರಸಿ ಇದರ ಅಧ್ಯಕ್ಷರು, ಅಪೆಕ್ಸ ಬ್ಯಾಂಕಿನ ನಿರ್ದೇಶಕರು, ಮಾನ್ಯ ಶಾಸಕರೂ ಆದ ಮಾನ್ಯ ಶ್ರೀ ಶಿವರಾಮ ಹೆಬ್ಬಾರರಿಗೆ ಹೃತ್ಪೂರ್ವಕವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇವೆ.

ನಮ್ಮ ಎಲ್ಲಾ ಕಾರ್ಯ ಚಟುವಟಿಕೆಗಳಿಗೆ ಸೂಕ್ತ ಮಾರ್ಗದರ್ಶನ ನೀಡಿ ನಮಗೆ ಕಾಲ ಕಾಲಕ್ಕೆ ಬೇಕಾದ ಕಾನೂನು ನೇರವು ಹಾಗೂ ಇನ್ನಿತರ ವ್ಯವಹಾರಿಕ ಸಲಹೆಗಳನ್ನು ನೀಡುತ್ತಾ ಬಂದಿರುವ ಕರ್ನಾಟಕ ರಾಜ್ಯ ಸಂಯುಕ್ತ ಸಹಕಾರಿ ನಿಯಮಿತ. ಬೆಂಗಳೂರು ಇದರ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ಮತ್ತು ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಪಾಟೀಲ ಹಾಗೂ ಬೆಳಗಾವಿಯ ಪ್ರಾಂತೀಯ ಕಛೇರಿಯ ಮತ್ತು ಬೆಂಗಳೂರಿನ ಕಛೇರಿಯ ಎಲ್ಲಾ ಸಿಬ್ಬಂದಿಗಳು ನಮ್ಮ ಸಂಘವನ್ನು ವಿಶೇಷವಾಗಿ ಗುರುತಿಸಿ ಕಾಲಕಾಲಕ್ಕೆ ಅವಶ್ಯವುಳ್ಳ ಸಲಹೆ ಸೂಚನೆಗಳನ್ನು ಹಾಗೂ ಮಾರ್ಗದರ್ಶನವನ್ನು ನೀಡುತ್ತಿದ್ದು ಅವರ ಸಹಕಾರವನ್ನು ಸ್ಮರಿಸುತ್ತೇನೆ.

ಸಹಕಾರ ಇಲಾಖೆಯ ಎಲ್ಲಾ ಅಧಿಕಾರಿಗಳನ್ನು ಸಕಾಲದಲ್ಲಿ ನಮ್ಮ ಸಾಲ ವಸೂಲಾತಿಯ ದಾವಾ ಪ್ರಕರಣಗಳನ್ನು ಇತ್ಯರ್ಥ ಪಡಿಸುವಲ್ಲಿ ಅತಿ ಶೀಘ್ರವಾಗಿ ಸ್ಪಂದಿಸುತ್ತಿರುವ ಸಹಕಾರಿಯ ನ್ಯಾಯಾಲಯದ ಎಲ್ಲ ಪದಾಧಿಕಾರಿಗಳನ್ನು ಅವರು ನೀಡುತ್ತಿರುವ ಸಹಕಾರಕ್ಕಾಗಿ ಸ್ಮರಿಸುತ್ತೇನೆ.

ನಮ್ಮ ಸಹಕಾರಿ ಸಂಘವು ವಿವಿಧ ಕ್ಷೇತ್ರಗಳಲ್ಲಿನ ವಿಮಾ ಕಂಪನಿಗಳೊಂದಿಗೆ ಒಪ್ಪಂದ ಮಾಡಿಕೊಂಡು ಗ್ರಾಹಕರಿಗೆ ಅವಶ್ಯಕತೆಗಳಿಗೆ ಅನುಗುಣವಾಗಿ ವಿಮಾ ಪಾಲಿಸಿಗಳನ್ನು ವಿತರಿಸುತ್ತಿದ್ದು, ಈ ಕಾರ್ಯದಲ್ಲಿ ಅಗತ್ಯ ಸಲಹೆ ಸೂಚನೆಗಳೊಂದಿಗೆ ಮಾರ್ಗದರ್ಶನ ನೀಡುತ್ತಾಬಂದಿರುವ ವಿಮಾ ಕಂಪನಿಯ ಎಲ್ಲಾ ಅಧಿಕಾರಿಗಳನ್ನು ಹಾಗೂ ಸಿಬ್ಬಂದಿಗಳ ಸಹಕಾರವನ್ನು ಸ್ಮರಿಸುತ್ತೇನೆ.

ನಮ್ಮ ಆಡಳಿತ ಮಂಡಳಿಯ ಎಲ್ಲ ನಿರ್ದೇಶಕರು, ಪಿಗ್ಮಿ ಸಂಗ್ರಾಹಕರು, ಬಂಗಾರ ಪರೀವಿಕ್ಷಕರು ಸಹಕಾರಿಯ ಪ್ರತಿಯೊಂದು ಅಭಿವೃದ್ಧಿಯ ವಿಚಾರದಲ್ಲಿ ನನ್ನೊಂದಿಗೆ ಸ್ಪಂದಿಸುತ್ತಾ ಪ್ರತಿಯೊಂದು ಸಂದರ್ಭಗಳಲ್ಲೂ ಸೂಕ್ತ ಮಾರ್ಗದರ್ಶನ ನೀಡುತ್ತಿರುವ ಎಲ್ಲ ನಿರ್ದೇಶಕರುಗಳಿಗೆ ಆಡಳಿತ ಸಲಹೆಗಾರರಿಗೆ ಹಾಗೂ ಕಾನೂನು ಸಲಹೆಗಾರರಿಗೆ ಮತ್ತು ಎಲ್ಲಾ ಲೆಕ್ಕಪರಿಶೋಧಕರಿಗೆ ಧನ್ಯವಾದಗಳು.

ಆಡಳಿತ ಮಂಡಳಿಯ ವರ್ಷದ ಸಾಧನೆಯನ್ನು ತಮ್ಮೊಂದಿಗೆ ಹಂಚಿಕೊಳ್ಳುತ್ತಾ ಮುಂದಿನ ಪ್ರಗತಿಗೆ ಭಾಜನರಾಗಬೇಕಾದ ಈ ಎಲ್ಲಾ ನಿರ್ದೇಶಕ ಸದಸ್ಯರು, ಸಿಬ್ಬಂದಿಗಳು ಹಾಗೂ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಸಹಕಾರ ನೀಡುತ್ತಿರುವ ಎಲ್ಲಾ ಗಣ್ಯಾತಿ ಗಣ್ಯ ಸದಸ್ಯರುಗಳಿಗೆ ಅಭಿಮಾನ ಪೂರಕವಾದ ಕೃತಜ್ಞತೆಯನ್ನು ಸಲ್ಲಿಸುತ್ತಾ ಮುಂದಿನ ವರ್ಷ, ದಿನಗಳು ಯು.ಕೆ. ಸೌಹಾರ್ದ ಸಹಕಾರಿ ಸಂಘದ ಅಭಿವೃದ್ಧಿಯ ಪರ್ವವಾಗಲು ತಮ್ಮೆಲ್ಲರ ಸಹಕಾರವನ್ನು ಬಯಸುತ್ತಾ ಈ ವರದಿಗೆ ವಿರಾಮ ನೀಡುತ್ತಿದ್ದೇನೆ.

ಸ್ಥಳ : **ಯಲ್ಲಾಪುರ**
ದಿನಾಂಕ : 02-09-2024

**ಪ್ರಮೋದ ಹೆಗಡೆ**
ಅಧ್ಯಕ್ಷರು



# ಯು. ಕೆ. ಸೌಹಾರ್ದ ಕ್ರೆಡಿಟ್ ಸಹಕಾರಿ ಸಂಘ ನಿ., ಯಲ್ಲಾಪುರ (ಉ. ಕ.)

## ದಿನಾಂಕ : 31-03-2024ಕ್ಕೆ ಇದ್ದಂತೆ ಸಮೀಕೃತ ಅಢಾವೆ ಪತ್ರಿಕೆ

| 31-03-2023 (ರಕಂ) | ಸಾಲದ ವಿವರ | ಶೆ. ನಂ. | 31-03-2024 (ರಕಂ) | 31-03-2023 (ರಕಂ) | ಜಿಂದಗಿ ವಿವರ | ಶೆ. ನಂ. | 31-03-2024 (ರಕಂ) |
|---|---|---|---|---|---|---|---|
| 10,00,00,000-00 | ಅಧಿಕೃತ ಶೇರು ಬಂಡವಾಳ | | 10,00,00,000-00 | 72,17,242-83 | ನಗದು ಶಿಲ್ಕು | | 88,20,720-33 |
| | | | | 1,50,28,957-43 | ಬ್ಯಾಂಕಿನಲ್ಲಿ ಶಿಲ್ಕು | 7 | 2,09,78,776-06 |
| 6,16,01,500-00 | ವಸೂಲಾದ ಶೇರುಗಳು | 1 | 6,71,65,300-00 | | | | |
| 8,29,64,384-56 | ನಿಧಿಗಳು | 2 | 9,15,99,257-41 | 35,54,18,281-00 | ಶೇರುಗಳು ಮತ್ತು ಗುಂತಾವಣೆ | 8 | 39,17,28,048.50 |
| 1,12,23,51,730-35 | ಠೇವುಗಳು | 3 | 1,31,10,20,633-11 | | | | |
| 2,90,34,552-00 | ಬ್ಯಾಂಕ್ ಸಾಲಗಳು | 4 | 2,87,29,697-00 | 90,99,09,079-00 | ಸಾಲಗಳು ಮತ್ತು ಮುಂಗಡಗಳು | 9 | 1,07,40,86,993-00 |
| 1,58,82,219-63 | ಇತರ ಬಾಬ್ತುಗಳು | 5 | 1,76,85,246-31 | 2,10,59,906-52 | ಆಸ್ತಿಗಳು | 10 | 1,90,76,999-52 |
| 10,002-00 | ಪ್ರಶಸ್ತಿಗಳು | 6 | 10,002-00 | 1,33,17,490-26 | ಬರತಕ್ಕ ಬಾಬ್ತುಗಳು | 11 | 1,24,85,431-42 |
| 1,01,06,568-50 | ನಿಕ್ಕೀ ಲಾಭ | | 1,09,66,833-00 | | | | |
| **1,32,19,50,957-04** | ಅಂತೂ | | **1,52,71,76,968-83** | **1,32,19,50,957-04** | ಅಂತೂ | | **1,52,71,76,968-83** |

ಪ್ರಧಾನ ವ್ಯವಸ್ಥಾಪಕರು ನಿರ್ದೇಶಕರು ನಿರ್ದೇಶಕರು ಅಧ್ಯಕ್ಷರು

### :: ಲೆಕ್ಕ ಪರಿಶೋಧನಾ ದೃಢೀಕರಣ ಪತ್ರ ::

ಯು.ಕೆ ಸೌಹಾರ್ದ ಕ್ರೆಡಿಟ್ ಸಹಕಾರಿ ಸಂಘ ನಿಯಮಿತ (ಉ.ಕ) ಇದರ ಸನ್ **2023-24** ನೇ ಸಾಲಿನ ಲೆಕ್ಕ ಪತ್ರಗಳನ್ನು ನಾನು ಪರಿಶೋಧಿಸಿರುತ್ತೇನೆ. ಲೆಕ್ಕಪರಿಶೋಧನೆಗೆ ಅವಶ್ಯವಿರುವ ಮಾಹಿತಿ ಮತ್ತು ಸಕಾರಣಗಳನ್ನು ಸಂಬಂಧಪಟ್ಟವರಿಂದ ಪಡೆದಿರುತ್ತೇನೆ. ಮತ್ತು ಅವುಗಳು ನನಗೆ ತಿಳಿದ ಮಟ್ಟಿಗೆ ತೃಪ್ತಿಕರವಾಗಿರುತ್ತದೆ. ನನ್ನ ಅಭಿಪ್ರಾಯದಂತೆ ಲೆಕ್ಕ ಪರಿಶೋಧನಾ ವೇಳೆಯಲ್ಲಿ ವ್ಯವಸ್ಥಾಪಕರು ನೀಡಿದ ವಿವರಣೆ ಹಾಗೂ ಸಮಜಾಯಿಷಿಗಳ ಮೇರೆಗೆ ಲಗತ್ತಿಸಿದ ನನ್ನ ಲೆಕ್ಕಪರಿಶೋಧನಾ ವರದಿಯಲ್ಲಿ ತಿಳಿಸಿದ ಅಂಶಗಳಿಗೆ ಒಳಪಟ್ಟು ಸನ್ **2023-24** ನೇ ಸಾಲಿನ ಲಾಭ ನಷ್ಟ ತಃಖ್ತೆ ಹಾಗೂ ದಿನಾಂಕ : **31-03-2024** ಕ್ಕೆ ಇದ್ದಂತೆ ಆಸ್ತಿ ಜವಾಬ್ದಾರಿ ತಃಖ್ತೆಯು ಬ್ಯಾಂಕಿನ ನೈಜ ಹಾಗೂ ಕರಾರುವಕ್ಕಾದ ಆರ್ಥಿಕ ಸ್ಥಿತಿಯನ್ನು ಪ್ರತಿಬಿಂಬಿಸುತ್ತದೆ ಎಂದು ದೃಢೀಕರಿಸುತ್ತೇನೆ.

ಮೇ/ ಐ. ಪಿ. ವರೂರ & ಕಂಪನಿ ಹುಬ್ಬಳ್ಳಿ

ಸ್ಥಳ : ಯಲ್ಲಾಪುರ

ಲೆಕ್ಕ ಪರಿಶೋಧಕರು

ದಿನಾಂಕ : 19-08-2024

# ಯು. ಕೆ. ಸೌಹಾರ್ದ ಕ್ರೆಡಿಟ್ ಸಹಕಾರಿ ಸಂಘ ನಿ., ಯಲ್ಲಾಪುರ (ಉ. ಕ.)

## ದಿನಾಂಕ : 01–04–2023 ರಿಂದ 31–03–2024ರ ವರೆಗಿನ ಸಮೀಕೃತ ಲಾಭ-ಹಾನಿ ತಃಖ್ತೆ

| 31–03–2023 | ಹಾನಿ | 31–03–2024 | 31–03–2023 | ಲಾಭ | 31–03–2024 |
|---|---|---|---|---|---|
| 2,62,125–70 | ವಿದ್ಯುತ್ ಬಿಲ್ಲು | 3,19,592–70 | | ಗುಂತಾವಣೆ | |
| 8,14,17,715–00 | ಠೇವುಗಳ ಬಡ್ಡಿ | 9,48,07,921–00 | 2,04,35,084–00 | ಮೇಲಿನಬಡ್ಡಿ | 2,03,00,283–00 |
| 13,222–00 | ಜಾಹೀರಾತು ವೆಚ್ಚ | 18,000–00 | 2,14,596–00 | ಶೇರುಫೀ | 2,15,130–00 |
| 98,28,508–00 | ವೇತನ | 1,07,96,293–00 | 1,24,520–74 | ಸೇವಾಶುಲ್ಕ | 3,43,183–59 |
| 48,000–00 | ನೌಕರರ ಭತ್ತೆ | 42,000–00 | 34,80,237–00 | ಪರಿಶೀಲನಾಶುಲ್ಕ | 42,96,915–00 |
| – | ನೌಕರರ ತುಟ್ಟಿಭತ್ತೆ | 10,78,593–00 | 45,978–00 | ಪ್ರವೇಶ ಫೀ | 42,384–00 |
| 24,67,171–68 | ಸವಕಳಿ | 26,67,162–00 | | ಕೆಡಿಸಿಸಿ | |
| 65,016–81 | ಇತರೇ | 3,57,398–93 | 1,57,500–00 | ಶೇರುಡಿವಿಡೆಂಡ್ | 1,57,500–00 |
| 6,20,780–74 | ಪ್ರಿಂಟಿಂಗ್&ಸ್ಟೇಶನರಿ | 10,50,203–28 | 3,25,717–81 | ರಿಕವರಿ ಖರ್ಚು | 1,07,821–59 |
| 3,26,560–20 | ಪೋಸ್ಟೇಜ&ಟೆಲಿಫೋನ್ | 2,65,831–52 | | ಸರ್ಕಾರಿ ಬಾಂಡ್ | |
| 25,000–00 | ವೃತ್ತಿ ತೆರಿಗೆ | 25,000–00 | 10,05,106–67 | ಮೇಲಿನಬಡ್ಡಿ | 3,73,885–00 |
| 29,84,137–30 | ಪಿಗ್ಮಿಕಮೀಷನ್ | 37,45,661–20 | 3,62,652–00 | ಫಾರ್ಮಫೀ | 3,67,567–00 |
| 3,80,994–00 | ವಿಮಾಖಾತೆ | 5,00,401–00 | 6,53,720–34 | ಕಮೀಷನ್ | 72,813–53 |
| 1,40,688–00 | ಪ್ರವಾಸಭತ್ತೆ | 1,43,952–00 | 9,41,84,277–64 | ಸಾಲಗಳಮೇಲಿನ ಬಡ್ಡಿ | 11,44,04,979–00 |
| – | ಸಿಸಿಎಸ್ಐಲ್ ವೆಚ್ಚ | – | –– | ಅಮಲಜಾರಿ ಫೀ | 1,10,596–00 |
| | ಐಆರ್‌ಡಿಎಐ | | | ವಕಾಲತ್ ಫೀ | 4,558–60 |
| 26,500–00 | ನೋಂದಣಿ ವೆಚ್ಚ | – | | ಫಿಟಿಂಗ್&ಫಿಕ್ಚರ್ಸ | |
| | ಭವಿಷ್ಯನಿಧಿ | | 15,480–00 | ಮಾರಾಟ | – |
| 80,543–00 | ಆಡಳಿತವೆಚ್ಚ | 88,575–00 | 1,37,318–00 | ಇ-ಸ್ಟಾಂಪ್ ಸೇವಾಶುಲ್ಕ | 1,49,510–00 |
| 2,25,045–00 | ವಾಹನ ವೆಚ್ಚ | 2,44,297–43 | 19,19,583–00 | ಹೆಚ್ಚುವರಿ ಬಡ್ಡಿ | 21,83,360–00 |
| 21,51,408–00 | ಇಮಾರತ್ ಬಾಡಿಗೆ | 17,14,760–00 | | ಡಿಬಿಎಸ್‌ಬ್ಯಾಂಕ್ | |
| 2,40,500–00 | ಗೌರವಧನ | 2,43,000–00 | 67,842–00 | ಎಸ್.ಬಿ.ಬಡ್ಡಿ | 2,758–38 |
| 1,05,800–00 | ಸಿಟಿಂಗ್ ಭತ್ತೆ | 1,09,000–00 | | ನೌಕರರ ಕ್ಷೇಮನಿಧಿ | |
| 20,025–00 | ಸಿಬ್ಬಂಧಿ ಸಭೆಯ ವೆಚ್ಚ | – | 43,850–00 | ವಂತಿಗೆ | – |
| 2,50,090–00 | ಆಡಿಟ್ ಫೀ | 2,50,000–00 | | ವಿಮಾಖಾತೆ ಕಮೀಷನ್ | 5,56,260–00 |
| | ಆದಾಯ ತೆರಿಗೆ | | | ಎಸ್.ಬಿ.ಐ. | |
| – | ಆಡಿಟ್ ಫೀ | 50,000–00 | 442–77 | ಎಸ್.ಬಿ.ಬಡ್ಡಿ | 3,657–00 |
| 60,667–00 | ವಾಹನ ಬಾಡಿಗೆ | 48,400–00 | | ಎಸ್.ಬಿ.ಐ.ಲಿಕ್ವಿಡ್ | |
| 31,577–00 | ವಕಾಲತ್ ಫೀ | – | 1,829–72 | ಫಂಡ್ ಬಡ್ಡಿ | – |
| 1,37,200–00 | ದಿನಗೂಲಿ | 1,41,900–00 | | ಆದಾಯತೆರಿಗೆ ಬಡ್ಡಿ | 2,86,995–00 |
| 1,37,092–25 | ಕಂಪ್ಯೂಟರ್ ಸರ್ವಿಸ್ | 2,21,817–59 | 1,54,330–00 | ಡೆಡ್ ಸ್ಟಾಕ ಮಾರಾಟ | 14,050–00 |
| 9,71,960–00 | ಭವಿಷ್ಯನಿಧಿ ವಂತಿಗೆ | 10,68,007–00 | | | |

(15ನೇ ಪುಟಕ್ಕೆ)

(14ನೇ ಪುಟದಿಂದ)

| 31–03–2023 | ಹಾನಿ | 31–03–2024 | 31–03–2023 | ಲಾಭ | 31–03–2024 |
|---|---|---|---|---|---|
| – | ಎಸ್.ಎಂ.ಎಸ್. ಸೇವಾಶುಲ್ಕ | – | 10,780–00 | ಕಂಪ್ಯೂಟರ್ ಮಾರಾಟ | 10,180–00 |
| 19,54,615–00 | ಕರಡು ಸಾಲದ ಅನುವು | 9,02,227–35 | 29,550–00 | ವಾಹನಮಾರಾಟ | |
| – | ನೋಂದಣಿ ಶುಲ್ಕ | 6,500–00 | | ಯುನಿಟಿ ಸ್ಮಾಲ್ | |
| 5,500–00 | ವಾಹನ ಭತ್ಯೆ | 8,900–00 | | ಫೈನಾನ್ಸ ಶೇರು | |
| 54,500–00 | ಸಹಕಾರಿ ವಂತಿಗೆ | 54,500–00 | 6,24,506–20 | ಡಿವಿಡೆಂಟ್ | 6,24,506–20 |
| 31,515–00 | ಲೈಸನ್ಸ ನವೀಕರಣ | 5,340–00 | | | |
| 8,10,960–00 | ಸಾಫ್ಟವೇರ್ ಮಾಸಿಕಶುಲ್ಕ | 8,10,960–00 | | | |
| . 64,000–00 | ದೇಣಿಗೆ | 21,000–00 | | | |
| 17,62,349–00 | ಸಾಲಗಳ ಮೇಲಿನ ಬಡ್ಡಿ | 18,68,934–00 | | | |
| 14,170–00 | ಕಂಪ್ಯೂಟರ್ ಎ.ಎಂ.ಸಿ. | 15,260–00 | | | |
| 1,71,176–00 | ಶಾಖೆ ಸ್ಥಳಾಂತರ ವೆಚ್ಚ | 6,431–00 | | | |
| 1,96,150–00 | ವಾಹನ ನಿಲುಗಡೆ ಬಾಡಿಗೆ | 1,79,998–00 | | | |
| 5,28,707–00 | ಸಂಚಿತ ವೇತನ | 2,65,924–00 | | | |
| 46,35,116–00 | ಬಡ್ಡಿ ರಿಯಾಯಿತಿ | 58,74,069–00 | | | |
| 8,285–00 | ವಾರ್ಷಿಕ ಸಭೆವೆಚ್ಚ | 35,734–38 | | | |
| 34,000–00 | ಪ್ರಭಾರಿ ಶಾಖಾ ವ್ಯವಸ್ಥಾಪಕರ ಭತ್ತೆ | 36,000–00 | | | |
| 1,43,562–00 | ನೌಕರರ ಸಮವಸ್ತ್ರ ಖಾತೆ | 1,34,006–00 | | | |
| 36,447–00 | ನೌಕರರ ಪ್ರೋತ್ಸಾಹ ಧನ | 15,452–00 | | | |
| 10,050–00 | ಕೆಡಿಸಿಸಿ ಬ್ಯಾಂಕ್ ಪರಿಶೀಲನಾ ಶುಲ್ಕ | 10,041–00 | | | |
| 18,054–00 | ನೌಕರರ ಎಸ್‌ಡಿಸಿಎಮ್ ವೆಚ್ಚ | 12,136–00 | | | |
| 7,000–00 | ಸಹಾಯಧನ | 13,000–00 | | | |
| – | ಆದಾಯತೆರಿಗೆ ಸಲಹಾಫೀ | 1,34,224–00 | | | |
| 3,276–00 | ನಿರ್ದೇಶಕರ/ಸಲಹೇಗಾರರ ಪ್ರವಾಸಭತ್ಯೆ | 7,520–00 | | | |
| 43,000–00 | ಜಿ.ಎಸ್.ಟಿ./ಪಿಎಫ್/ ಟಿಡಿಎಸ್ ಫೀ | 44,000–00 | | | |

(16ನೇ ಪುಟಕ್ಕೆ)

(15ನೇ ಪುಟದಿಂದ)

| 31-03-2023 | ಹಾನಿ | 31-03-2024 | 31-03-2023 | ಲಾಭ | 31-03-2024 |
|---|---|---|---|---|---|
| 1,31,567-57 | ಶಾಖೆ ಪ್ರಾರಂಭೋತ್ಸವ ಖರ್ಚು | - | | | |
| 1,000-00 | ಚಲನ್ ಫೀ | - | | | |
| 57,734-00 | ರಿಕರಿಂಗ ಠೇವು ಕಮೀಷನ್ | 24,861-00 | | | |
| - | ಶೇರು ಅಮಾನತ್ ವೆಚ್ಚ | - | | | |
| 28,300-00 | ನೌಕರರ ಗ್ರಾಚ್ಯುಟಿ ನಿಧಿ | - | | | |
| - | ನೌಕರರ ಗ್ರಾಚುಟಿ ನಗದೀಕರಣ | 22,995-00 | | | |
| 5,000-00 | ಸೌಹಾರ್ದ ಒಕ್ಕೂಟ ವಾರ್ಷಿಕ ಶುಲ್ಕ | - | | | |
| 33,122-00 | ಜಿಎಸಟಿ ದಂಡದ ಬಡ್ಡಿ | - | | | |
| 20,741-14 | ಬ್ಯಾಂಕ ಸೇವಾ ಶುಲ್ಕ | 23,653-21 | | | |
| - | ಹೂಡಿಕೆ ಮಾರಾಟದ ನಷ್ಟ | 2,06,250-00 | | | |
| 527-00 | ಮುದ್ರಾಂಕ ಶುಲ್ಕ ಪಾವತಿ | - | | | |
| 56,135-00 | ಕಟ್ಟಡ ನವೀಕರಣ ವೆಚ್ಚ | - | | | |
| - | ಸಿಎಸಜಿಎಲ್ ವಾರ್ಷಿಕ ಶುಲ್ಕ | 10,900-00 | | | |
| - | ಕಂಪ್ಯೂಟರ್ ಅಡಿಟ್ ಫೀ | 81,390-30 | | | |
| 3,448-00 | ಸಹಕಾರಿ ಆಸ್ತಿ ತೆರಿಗೆ | 12,955-00 | | | |
| - | ನೌಕರರ ಕ್ಷೇಮನಿಧಿ ಅನುವು | 10,07,875-00 | | | |
| - | ನೌಕರರ ಕಲ್ಯಾಣನಿಧಿ ಅನುವು | 1,50,000-00 | | | |
| - | ನೌಕರರ ಬೋನಸ್ ಅನುವು | 14,70,000-00 | | | |
| | ನೌಕರರ ಇಎಸ್ಐ ವಂತಿಗೆ | 1,55,077-00 | | | |
| | ಚರಾಸ್ತಿ ಕಡಿತ | 26,000-00 | | | |
| 1,01,06,568-50 | ನಿಕ್ಕಿಲಾಭ | 1,09,66,833-00 | | | |
| **12,39,94,901-89** | | **14,46,18,712-89** | **12,39,94,901-89** | .....ಅಂತೂ..... | **14,46,18,712-89** |

# :: ಶೆಡ್ಯೂಲ್‌ಗಳು ::

## ಶೆಡ್ಯೂಲ್ 01 : ವಸೂಲಾದ ಶೇರುಗಳು

| ವಿವರ | 2022-23 | 2023-24 |
|---|---|---|
| ಮೆಂಬರರ ಶೇರು | 6,16,01,500-00 | 6,71,65,300-00 |
| ಅಂತೂ.. | **6,16,01,500-00** | **6,71,65,300-00** |

## ಶೆಡ್ಯೂಲ್ 02 : ನಿಧಿಗಳು

| ವಿವರ | 2022-23 | 2023-24 |
|---|---|---|
| ಕಾಯ್ದಿಟ್ಟ ನಿಧಿ | 1,40,38,900-61 | 1,66,32,235-11 |
| ನೌಕರರ ಕ್ಷೇಮ ನಿಧಿ | 20,75,872-00 | 30,29,042-00 |
| ನೌಕರರ ಕಲ್ಯಾಣ ನಿಧಿ | – | 1,50,000-00 |
| ಕರಡು ಸಾಲದ ನಿಧಿ | 4,37,03,271-00 | 4,48,84,217-20 |
| ಸಾಮಾನ್ಯ ಕ್ಷೇಮ ನಿಧಿ | 18,66,831-00 | 23,72,159-00 |
| ಕಟ್ಟಡ ನಿಧಿ | 92,10,500-00 | 92,10,500-00 |
| ಅನಿರೀಕ್ಷಿತ ನಷ್ಟ ನಿಧಿ | 1,16,87,638-74 | 1,37,08,951-74 |
| ಧರ್ಮಾರ್ಥ&ಪ್ರಚಾರನಿಧಿ | 1,156-00 | 10,656-00 |
| ಬೆಳ್ಳಿಹಬ್ಬದ ನಿಧಿ | – | 15,00,000-00 |
| ಡಿವಿಡೆಂಡ್ ಸ್ಥಿರೀಕರಣನಿಧಿ | 1,01,496-36 | 1,01,496-36 |
| ಗುಂತಾವಣೆ ಭದ್ರತಾ ನಿಧಿ | 2,78,718-85 | – |
| ಅಂತೂ.. | **8,29,64,384-56** | **9,15,99,257-41** |

## ಶೆಡ್ಯೂಲ್ 03 : ಠೇವುಗಳು

| ವಿವರ | 2022-23 | 2023-24 |
|---|---|---|
| ಉಳಿತಾಯ ಖಾತೆ | 5,12,70,897-21 | 6,13,00,935.81 |
| ಕ್ಯಾಶ್ ಸರ್ಟಿಫಿಕೆಟ | 55,56,04,528-00 | 65,18,98,578.00 |
| ಮುದ್ದತಿ ಠೇವು | 42,93,91,885-00 | 50,25,09,210.00 |
| ರಿಕರಿಂಗ್ ಠೇವು | 1,23,54,304-00 | 1,62,49,079.00 |
| ಪಿಗ್ಮಿ ಠೇವು | 3,95,29,802-00 | 4,38,47,878.00 |
| ಭದ್ರತಾ ಠೇವು | 16,55,500-00 | 16,78,000.00 |
| ಸಂಚಯನಿ ರಿಕರಿಂಗ್ ಠೇವು | 9,23,400-00 | 8,38,300.00 |
| ಚಾಲ್ತಿ ಖಾತೆ | 1,83,44,328-14 | 2,08,29,152.30 |
| ಪ್ಲೆಕ್ಸಿ ಉಳಿತಾಯಖಾತೆ | 1,17,43,000-00 | 1,18,69,500.00 |
| ಸ್ತ್ರೀಶಕ್ತಿ ಮುದ್ದತಿ ಠೇವು | 15,34,086-00 | – |
| | **1,12,23,51,730-35** | **1,31,10,20,633-11** |

ಅಂತೂ..

## ಶೆಡ್ಯೂಲ್ 04 : ಬ್ಯಾಂಕ್ ಸಾಲಗಳು

| ವಿವರ | 2022-23 | 2023-24 |
|---|---|---|
| ಕೆ.ಡಿ.ಸಿ.ಸಿ. ಕ್ಯಾಶ್ ಕ್ರೆಡಿಟ್ ಸಾಲ | 1,80,34,502-00 | 79,697-00 |
| ವಿಕಾಸ ಬ್ಯಾಂಕ್ ಓಡಿಡಿಎಲ್ | 1,10,00,050-00 | 2,86,50,000-00 |
| ಅಂತೂ.. | **2,90,34,552-00** | **2,87,29,697-00** |

## ಶೆಡ್ಯೂಲ್ 05 : ಕೊಡತಕ್ಕ ಬಾಬ್ತುಗಳು

| ವಿವರ | 2022-23 | 2023-24 |
|---|---|---|
| ಕೊಡತಕ್ಕ ಬಡ್ಡಿ | 1,22,91,433-00 | 1,40,44,415-00 |
| ಕೊಡತಕ್ಕ ಡಿವಿಡೆಂಡ್ | 1,94,914-00 | 1,29,167-00 |
| ಕೊಡತಕ್ಕ ಟಿಡಿಎಸ್ | - | 24,707-00 |
| ಅಡಿಟ್ ಫೀ ಅನುವು | 2,50,000-00 | 2,50,000-00 |
| ಆದಾಯತೆರಿಗೆ ಆಡಿಟ್ ಫೀ | - | 50,000-00 |
| ಸಲಹಾ ಫೀ | - | 50,000-00 |
| ಶೇರು ಅಮಾನತ | 28,305-00 | 24,105-00 |
| ನೌಕರರ ವಿಮೆ | 33,049-00 | 38,723-00 |
| ಠೇವು ಮಾನತ್ | 11,76,120-00 | 10,71,665-00 |
| ಅಮಾನತ್ ಖಾತೆ | 33,082-93 | 49,290-68 |
| ಕೊಡತಕ್ಕ ಜಿ.ಎಸ್.ಟಿ | 1,63,884-70 | 2,49,333-63 |
| ಎಲ್ ಆಯ್ ಸಿ ಪ್ರೀಮಿಯಂ ಅಡ್ವಾನ್ಸ್ | 11,125-00 | - |
| ಸಿಬ್ಬಂಧಿ ವೃತ್ತಿತೆರಿಗೆ | 6,400-00 | 1,200-00 |
| ಆದಾಯತೆರಿಗೆ ಅನುವು | 15,00,000-00 | - |
| ಸಿಬಂದಿ ಬೋನಸ್ ಅನವು | 24,598-00 | 15,20,866-00 |
| ನೌಕರರ ಇ.ಎಸ್.ಐ. | - | 4,498-00 |
| ನೌಕರರ ಭವಿಷ್ಯನಿಧಿ | 1,69,308-00 | 1,77,276-00 |
| ಅಂತೂ.. | **1,58,82,219-63** | **1,76,85,246-31** |

## ಶೆಡ್ಯೂಲ್ 06 : ಪ್ರಶಸ್ತಿಗಳು

| ವಿವರ | 2022-23 | 2023-24 |
|---|---|---|
| ಸಹಕಾರಿ ಪ್ರಶಸ್ತಿ (2012-13) | 5,001-00 | 5,001-00 |
| ಸಹಕಾರಿ ಪ್ರಶಸ್ತಿ (2013-14) | 5,001-00 | 5,001-00 |
| ಅಂತೂ.. | **10,002-00** | **10,002-00** |

(19ನೇ ಪುಟಕ್ಕೆ)

(18ನೇ ಪುಟದಿಂದ)

## ಶೆಡ್ಯೂಲ್ 07 : ಬ್ಯಾಂಕಿನಲ್ಲಿ ಶಿಲ್ಕು

| ವಿವರ | 2022–23 | 2023–24 |
|---|---|---|
| ಕೆ.ಡಿ.ಸಿ.ಸಿ ಚಾಲ್ತಿ ಖಾತೆ ಯಲ್ಲಾಪುರ | 28,47,080–00 | 49,39,300–20 |
| ಕೆ.ಡಿ.ಸಿ.ಸಿ. ಬ್ಯಾಂಕ್ ಗುಳ್ಳಾಪುರ ಶಾಖೆ | 13,524–00 | 3,946–00 |
| ಕೆ.ಡಿ.ಸಿ.ಸಿ ಬ್ಯಾಂಕ್ ಗೋಕರ್ಣ ಶಾಖೆ | 10,000–00 | 3,000–00 |
| ಕೆ.ಡಿ.ಸಿ.ಸಿ ಬ್ಯಾಂಕ್ ಕುಮಟಾ ಶಾಖೆ | 10,528–46 | 1,30,036–00 |
| ಕೆ.ಡಿ.ಸಿ.ಸಿ ಬ್ಯಾಂಕ್ ಶಿರಸಿ ಶಾಖೆ | 31,881–48 | 5,581–48 |
| ಕೆ.ಡಿ.ಸಿ.ಸಿ ಬ್ಯಾಂಕ್ ಸಿದ್ಧಾಪುರ ಶಾಖೆ | 10,000–00 | 14,194–00 |
| ಕೆ.ಡಿ.ಸಿ.ಸಿ ಬ್ಯಾಂಕ್ ದಾಂಡೇಲಿ ಶಾಖೆ | 5,000–00 | 5,000–00 |
| ಕೆ.ಡಿ.ಸಿ.ಸಿ ಬ್ಯಾಂಕ್ ಹೊನ್ನಾವರ ಶಾಖೆ | 25,000–00 | 25,000–00 |
| ಕೆ.ಡಿ.ಸಿ.ಸಿ.ಬ್ಯಾಂಕ್ ಮುಂಡಗೋಡ ಚಾಲ್ತಿಖಾತೆ | 20,089–00 | 10,097–00 |
| ಎಸ್.ಬಿ. ಐ. ಯಲ್ಲಾಪುರ ಚಾಲ್ತಿ ಖಾತೆ | 73,07,715–38 | 1,49,812–88 |
| ವಿಕಾಸ ಅರ್ಬನ್ ಬ್ಯಾಂಕ್ ಯಲ್ಲಾಪುರ ಚಾಲ್ತಿ ಖಾತೆ | 84,133–70 | 25,665–70 |
| ವಿಕಾಸ ಅರ್ಬನ್ ಬ್ಯಾಂಕ್ ಶಿರಸಿ ಚಾಲ್ತಿ ಖಾತೆ | 3,21,714–00 | 12,055–00 |
| ಕೆನರಾ ಬ್ಯಾಂಕ್ ಗೋಕರ್ಣ ಚಾಲ್ತಿ ಖಾತೆ | 2,518–00 | 71,571–07 |
| ಎಸ್ ಬಿ ಐ ಎಸ್ ಬಿ ಯಲ್ಲಾಪುರ | 50,000–00 | 30,24,432–52 |
| ಐ ಸಿ ಐ ಸಿ ಐ ಬ್ಯಾಂಕ ಕುಮಟಾ | 6,69,275–00 | 2,05,613–89 |
| ಎಸ್. ಬಿ. ಐ. ದಾಂಡೇಲಿ ಚಾಲ್ತಿ ಖಾತೆ | 1,00,000–00 | 1,40,000–00 |
| ಎಸ್. ಬಿ. ಐ ಸಿದ್ದಾಪುರ ಚಾಲ್ತಿ ಖಾತೆ | 5,650–00 | 10,000–00 |
| ಕೊಟಕ್ ಮಹಿಂದ್ರಾ ಬ್ಯಾಂಕ್ ಚಾಲ್ತಿ ಖಾತೆ | 19,731–00 | 19,731–00 |
| ಎಸ್. ಬಿ. ಐ. ಯಲ್ಲಾಪುರ ಚಾಲ್ತಿ ಖಾತೆ | 27,354–45 | 47,48,896–18 |
| ಎಸ್. ಬಿ. ಐ. ಯಲ್ಲಾಪುರ (ಗುಳ್ಳಾಪುರ) | 92,699–00 | 21,042–00 |
| ಎಸ್.ಬಿ.ಐ.ಶಿರಸಿ ಚಾಲ್ತಿಖಾತೆ | 5,89,139–08 | 2,07,389–50 |
| ಬ್ಯಾಂಕ್ ಆಫ್ ಬರೋಡ ಯಲ್ಲಾಪುರ | 33,000–00 | 1,24,581–00 |
| ಡಿ ಬಿ ಎಸ್ ಬ್ಯಾಕ್ ಕಾರವಾರ | 1,25,086–38 | – |
| ಎಸ್ ಬಿ ಐ ಹೊನ್ನಾವರ | 11,39,000–00 | 1,00,000–00 |
| ಐಸಿಐಸಿಐ ಬ್ಯಾಂಕ್ ಕುಮಟಾ ಚಾಲ್ತಿಖಾತೆ | 5,08,000–00 | 6,00,000–02 |
| ಎಸ್.ಬಿ.ಐ.ಮುಂಡಗೋಡ ಚಾಲ್ತಿಖಾತೆ | 46,483–00 | 26,000–00 |
| ಯುನಿಟಿ ಬ್ಯಾಂಕ್ ಯಲ್ಲಾಪುರ ಚಾಲ್ತಿಖಾತೆ | 5,62,060–20 | 3,115–40 |
| ದಿ ಶಿರಸಿ ಅರ್ಬನ್ ಬ್ಯಾಂಕ್ ಯಲ್ಲಾಪುರ ಚಾಲ್ತಿಖಾತೆ | 2,05,000–00 | 14,97,890–20 |
| ಕೆ.ಡಿ.ಸಿ.ಸಿ. ಬ್ಯಾಂಕ್ ಕುಮಟಾ ಶಾಖೆ | 64,330–00 | – |
| ಎಸ್.ಬಿ.ಐ. ಗೋಕರ್ಣ ಚಾಲ್ತಿಖಾತೆ 2 | 1,00,000–00 | 1,36,600–00 |
| ಶಿರಸಿ ಅರ್ಬನ್ ಬ್ಯಾಂಕ್ ಕುಮಟಾ ಚಾಲ್ತಿಖಾತೆ | 2,965–30 | 42,769–90 |

(20ನೇ ಪುಟಕ್ಕೆ)

(19ನೇ ಪುಟದಿಂದ)

| ವಿವರ | 2022-23 | 2023-24 |
|---|---|---|
| ಹೆಚ್.ಡಿ.ಎಫ್.ಸಿ ಬ್ಯಾಂಕ್ ಯಲ್ಲಾಪುರ | – | 10,000-00 |
| ಹೆಚ್.ಡಿ.ಎಫ್.ಸಿ ಬ್ಯಾಂಕ್ ಯಲ್ಲಾಪುರ | – | 6,49,116-04 |
| ಹೆಚ್.ಡಿ.ಎಫ್.ಸಿ ಬ್ಯಾಂಕ್ ಗುಳ್ಳಾಪುರ | – | 5,50,000-50 |
| ಹೆಚ್.ಡಿ.ಎಫ್.ಸಿ ಬ್ಯಾಂಕ್ ಗೋಕರ್ಣ | – | 17,860-00 |
| ಹೆಚ್.ಡಿ.ಎಫ್.ಸಿ ಬ್ಯಾಂಕ್ ಕುಮಟಾ | – | 10,00,000-56 |
| ಹೆಚ್.ಡಿ.ಎಫ್.ಸಿ ಬ್ಯಾಂಕ್ ಶಿರಸಿ | – | 26,033-36 |
| ಹೆಚ್.ಡಿ.ಎಫ್.ಸಿ ಬ್ಯಾಂಕ್ ಸಿದ್ದಾಪುರ | – | 2,00,000-00 |
| ಹೆಚ್.ಡಿ.ಎಫ್.ಸಿ ಬ್ಯಾಂಕ್ ದಾಂಡೇಲಿ | – | 2,00,000-00 |
| ಹೆಚ್.ಡಿ.ಎಫ್.ಸಿ ಬ್ಯಾಂಕ್ ಹೊನ್ನಾವರ | – | 9,03,973-00 |
| ಹೆಚ್.ಡಿ.ಎಫ್.ಸಿ ಬ್ಯಾಂಕ್ ಮುಂಡಗೋಡ | – | 10,00,000-00 |
| ಹೆಚ್.ಡಿ.ಎಫ್.ಸಿ ಬ್ಯಾಂಕ್ ಕುಮಟಾ | – | 3,000-00 |
| ಎಸ್.ಬಿ.ಐ.ಕುಮಟಾ ಚಾಲ್ತಿಖಾತೆ | – | 65,272-16 |
| ಕೆ.ಡಿ.ಸಿ.ಸಿ.ಬ್ಯಾಂಕ್ ಕುಮಟಾ ಚಾಲ್ತಿ ಖಾತೆ | – | 50,199-50 |
| ಅಂತೂ.. | **1,50,28,957-43** | **2,09,78,776-06** |

## ಶೆಡ್ಯೂಲ್ 08 : ಬ್ಯಾಂಕಿನಲ್ಲಿ ಠೇವುಗಳು

| ವಿವರ | 2022-22 | 2023-24 |
|---|---|---|
| ಕೆ.ಡಿ.ಸಿ.ಸಿ ಬ್ಯಾಂಕ್ ಯಲ್ಲಾಪುರ ಮುದ್ದತಿ ಠೇವು | 8,00,00,000-00 | 8,75,00,000-00 |
| ಕೆ.ಡಿ.ಸಿ.ಸಿ.ಬ್ಯಾಂಕ್ ಶೇರು | 22,50,000-00 | 22,50,000-00 |
| ಕಾಯ್ದಿಟ್ಟ ನಿಧಿ | 1,40,38,901-00 | 1,66,32,235-50 |
| ವಿಕಾಸ ಅರ್ಬನ್ ಬ್ಯಾಂಕ್ ಮುದ್ದತಿ ಠೇವು | 7,75,00,000-00 | 8,50,00,000-00 |
| ಕೆ.ಡಿ.ಸಿ.ಸಿ.ಬ್ಯಾಂಕ್ ಸಾಮಾನ್ಯ ಕ್ಷೇಮ ನಿಧಿ | 15,05,789-00 | 23,72,159-00 |
| ಉತ್ತರಕನ್ನಡ ಜಿಲ್ಲಾ ಸೌಹಾರ್ದ ಒಕ್ಕೂಟ ಶೇರು | 5000-00 | 5,000-00 |
| ಯುನಿಟಿ ಸ್ಮಾಲ್ ಫೈನಾನ್ಸ ಬ್ಯಾಂಕ್ ಶೇರು | 62450620-00 | 6,24,50,620-00 |
| ಅನಿರೀಕ್ಷಿತ ನಷ್ಟನಿಧಿ | 11687639-00 | 1,37,08,952-00 |
| ಹೆಚ್.ಡಿ.ಎಫ್.ಸಿ. ಬ್ಯಾಂಕ್ ಯಲ್ಲಾಪುರ ಮುದ್ದತಿಠೇವು | – | 2,00,01,000-00 |
| ಶಿರಸಿ ಅರ್ಬನ್ ಬ್ಯಾಂಕ್ ಯಲ್ಲಾಪುರ ಮುದ್ದತಿಠೇವು | 45970000-00 | 6,10,00,000-00 |
| ನೌಕರರ ಕ್ಷೇಮನಿಧಿ [ಕೆಡಿಸಿಸಿ ಬ್ಯಾಂಕ್] | 2195422-00 | 21,95,422-00 |
| ಕೆನರಾ ಬ್ಯಾಂಕ್ ಗೋಕರ್ಣ | 2000000-00 | 20,00,000-00 |
| ಡಿ.ಎಂ.ಸಿ. ಬ್ಯಾಂಕ್ ಕಾರವಾರ ಮುದ್ದತಿ ಠೇವು | 00-00 | 10,00,000-00 |
| ಯುನಿಟಿ ಸ್ಮಾಲ್ ಫೈನಾನ್ಸ ಬ್ಯಾಂಕ್ ಇಕ್ವಿಟಿ ಶೇರು | 15612660-00 | 1,56,12,660-00 |
| ಕರ್ನಾಟಕ ಬ್ಯಾಂಕ ಮುದ್ದತಿ ಠೇವು | 20000000-00 | 2,00,00,000-00 |
| ಭಾರತ ಸರಕಾರದ ಬಾಂಡ್ | 12496000-00 | – |
| ರಾಜ್ಯ ಸರಕಾರದ ಬಾಂಡ್ | 7706250-00 | – |
| ಅಂತೂ.. | **35,54,18,281-00** | **39,17,28,048-50** |

## ಶೆಡ್ಯೂಲ್ 09 : ಸಾಲ ಮತ್ತು ಮುಂಗಡಗಳು

| ವಿವರ | 2022-23 | 2023-24 |
|---|---|---|
| ಕ್ಯಾಶ್ ಕ್ರೆಡಿಟ್ ಸಾಲ | 23,02,53,287-00 | 22,80,99,172-00 |
| ಠೇವು ಸಾಲ | 3,14,14,887-00 | 3,51,90,093-00 |
| ವಾಹನ ಸಾಲ | 8,97,77,716-00 | 12,95,19,666-00 |
| ಗೃಹ ನಿವೇಶನ ಸಾಲ | 7,66,68,402-00 | 9,20,97,700-00 |
| ಅವಧಿ ಸಾಲ | 25,28,39,254-00 | 27,15,97,212-00 |
| ಜಾಮೀನು ಸಾಲ | 1,44,50,313-00 | 1,66,08,052-00 |
| ಬಂಗಾರ ದಾಗೀನು ಸಾಲ | 3,27,15,189-00 | 3,69,38,569-00 |
| ಒ. ಡಿ. ಡಿ. ಎಲ್. ಸಾಲ | 1,47,63,832-00 | 1,49,39,266-00 |
| ಸಿಬ್ಬಂದಿ ಸಾಲ | 68,22,104-00 | 86,28,786-00 |
| ಅಡಮಾನ ಸಾಲ | 16,02,04,095-00 | 23,84,75,644-00 |
| ಮಹಿಳಾ ಸಾಲ | -- | 19,92,833-00 |
| ಅಂತೂ.. | **90,99,09,079-00** | **1,07,40,86,993-00** |

## ಶೆಡ್ಯೂಲ್ 10 : ಆಸ್ತಿಗಳು

| ವಿವರ | 2022-23 | 2023-24 |
|---|---|---|
| ಫಿಟಿಂಗ್ಸ್ ವ ಫಿಕ್ಚರ್ಸ | 30,24,455-00 | 22,22,627.00 |
| ವಾಹನ ಖಾತೆ | 2,46,237-00 | 2,41,338.00 |
| ಡೆಡ್ ಸ್ಟಾಕ್ | 19,76,815-00 | 15,31,176.78 |
| ಕಂಪ್ಯೂಟರ್ | 8,02,057-52 | 8,34,649.74 |
| ಸಹಕಾರಿಯ ಸ್ಥಿರಾಸ್ತಿ | 83,93,890-00 | 83,93,890.00 |
| ಕಂಪ್ಯೂಟರ್ ಸಾಪ್ಟವೇರ್ | 4,05,050-00 | 3,49,350.00 |
| ಸಹಕಾರಿಯ ಸ್ವಂತ ಕಟ್ಟಡ | 62,11,402-00 | 55,03,968.00 |
| ಅಂತೂ.. | **2,10,59,906-52** | **1,90,76,999.52** |

## ಶೆಡ್ಯೂಲ್ 11 : ಇತರ ಬರತಕ್ಕ ಬಾಬ್ತುಗಳು

| ವಿವರ | 2022-23 | 2023-24 |
|---|---|---|
| ಟೆಲಿಫೋನ್ ಠೇವು | 8,499-00 | 8,499-00 |
| ಬರತಕ್ಕ ಬ್ಯಾಂಕ್ ಬಡ್ಡಿ | 29,13,970-00 | 48,67,329-00 |
| ಬರತಕ್ಕ ಟಿಡಿಎಸ್ | 29,86,221-00 | 12,34,612-00 |
| ಟಿಕೇಟ್ ಬುಕ್ಕಿಂಗ್ ಖಾತೆ | 810-00 | 981-00 |
| ಆದಾಯ ತೆರಿಗೆ ಮುಂಗಡ | 9,00,000-00 | |

(21ನೇ ಪುಟದಿಂದ)

| ವಿವರ | 2022–23 | 2023–24 |
|---|---|---|
| ವಾಹನ ವಿಮೆ | 1,62,744–00 | – |
| ಬಾಡಿಗೆ ಭದ್ರತಾ ಠೇವು | 11,50,000–00 | 1,80,653–00 |
| ಸ್ಟಾಂಪ್ ಪೇಪರ್ ಭದ್ರತಾ ಠೇವು | 2,00,000–00 | 11,50,000–00 |
| ಇ–ಸ್ಟಾಂಪಿಂಗ್ ಮುಂಗಡ | 1,72,604–00 | 2,00,000–00 |
| ವಾಹನ ವಿಮೆ ಮುಂಗಡ | 93,414–00 | 2,04,336–00 |
| ಚೆಕ್ ನಗದೀಕರಣ ಖಾತೆ | 20,45,479–00 | – |
| ಕೇಂದ್ರ ಸರಕಾರದ ಬಾಂಡ್ ಬಡ್ಡಿ ಅನವು | 3,80,865–00 | 24,50,000–00 |
| ಎ ಬಿ ಎನ್ ಫೀ | 3,18,270–00 | – |
| ಅಮಲಜಾರಿ ಫೀ | 2,44,987–00 | 2,38,567–00 |
| ಜಿ. ಎಸ್ ಟಿ | 1,43,695–26 | 2,94,582–00 |
| ಬರತಕ್ಕ ರಿಕವರಿ ವೆಚ್ಚ | 6,38,785–00 | 1,38,345–42 |
| ಕಂಪ್ಯೂಟರ್ ಸೊಪ್ಟವೇರ್ ಮುಂಗಡ | – | 5,72,487–00 |
| ಮುದ್ರಣ ಶಿಲ್ಕು | 2,64,530–00 | – |
| ಕಾರ್ಪೊರೇಟ್ ವಿಮಾಖಾತೆ | 5,500–00 | 3,15,135–00 |
| ಸಾಲವಸೂಲಾತಿ ವೆಚ್ಚ ಅಮಾನತ್ | – | 5,500–00 |
| ವೈಯಕ್ತಿಕ ವಿಮೆ | 15,592–00 | 1,475–00 |
| ಕಟ್ಟಡ ಬಾಡಿಗೆ ಮುಂಗಡ | 6,61,060–00 | 15,613–00 |
| ಸಾಲಗಳ ಇತರೆ ವೆಚ್ಚ | – | 5,05,300–00 |
| ಹಣ ವಿನಿಮಯ ಖಾತೆ | 3,150–00 | 15,347–00 |
| ಎಲ್ ಐ ಸಿ ಪ್ರೀಮಿಯಂ ಮುಂಗಡ | 7,315–00 | 18,294–00 |
| ವಿಮಾ ಖಾತೆ ಮುಂಡಗ | –– | 68,376–00 |
| ಒಟ್ಟು.. | **1,33,17,490–26** | **1,24,85,431–42** |



# ಕಳೆದ 5 ವರ್ಷಗಳ ಪ್ರಗತಿ ನೋಟ

(ರೂ. ಲಕ್ಷಗಳಲ್ಲಿ)

| ಅ.ನಂ. | ವಿವರ | ವರ್ಷ 2019-20 | ವರ್ಷ 2020-21 | ವರ್ಷ 2021-22 | ವರ್ಷ 2022-23 | ವರ್ಷ 2023-24 |
|---|---|---|---|---|---|---|
| 01. | ಸದಸ್ಯತ್ವ (ಅ ವರ್ಗ) | 13,147 | 15,122 | 16,835 | 18,481 | 19,968 |
| 02. | ಶೇರು ಬಂಡವಾಳ | 525.93 | 549.76 | 567.59 | 616.01 | 671.65 |
| 03. | ಠೇವಣಿಗಳು | 8,085.90 | 9,431.57 | 10,279.21 | 11,223.52 | 13,110.20 |
| 04. | ನೀಡಿದ ಸಾಲ | 6,253.87 | 6,835.11 | 7,689.47 | 9,765.26 | 11,096.20 |
| 05. | ವಸೂಲಿ ಸಾಲ | 5,416.50 | 6,456.71 | 7,119.73 | 8,354.87 | 9,454.42 |
| 06. | ಬಾಕಿ ಇದ್ದ ಸಾಲ | 6,740.56 | 7,118.96 | 7,688.70 | 9,099.09 | 10,740.87 |
| 07. | ಕಟ್ಟುಬಾಕಿ ಸಾಲ | 1,043.95 | 1,239.31 | 749.02 | 1,041.13 | 986.97 |
| 08. | ದುಡಿಯುವ ಬಂಡವಾಳ | 9,708.23 | 10,680.01 | 11,625.41 | 13060.58 | 14,985.14 |
| 09. | ವಸೂಲಾತಿ ಶೇ. ಪ್ರಮಾಣ | 84.51 | 82.59 | 90.26 | 88.56 | 90.81 |
| 10. | ಅಡಿಟ್ ವರ್ಗೀಕರಣ | 'ಬ' | 'ಬ' | 'ಬ' | 'ಬ' | 'ಬ' |
| 11. | ಗಳಿಸಿದ ನಿಕ್ಕಿಲಾಭ | 15.23 | 115.69 | 72.21 | 101.07 | 109.67 |



# ಯು. ಕೆ. ಸೌಹಾರ್ದ ಕ್ರೆಡಿಟ್ ಸಹಕಾರಿ ಸಂಘ ನಿ., ಯಲ್ಲಾಪುರ (ಉ. ಕ.)

## 2024-25 ನೇ ಸಾಲಿನ ಅಂದಾಜು ಪತ್ರಿಕೆ

(ರೂ. ಲಕ್ಷಗಳಲ್ಲಿ)

| ವೆಚ್ಚದ ವಿವರ | ರಕಂ | ಆದಾಯದ ವಿವರ | ರಕಂ |
|---|---|---|---|
| ಕಟ್ಟಡ ಬಾಡಿಗೆ | 20,00,000.00 | ಪ್ರವೇಶ ಫೀ | 75,000-00 |
| ಭವಿಷ್ಯ ನಿಧಿ ವಂತಿಗೆ | 12,00,000.00 | ಫಾರ್ಮ್ ಫೀ | 4,50,000-00 |
| ತೆರಿಗೆ ಸಲಹಾ ಫೀ | 50,000.00 | ಪರಿಶೀಲನಾ ಶುಲ್ಕ | 55,00,000-00 |
| ವಾರ್ಷಿಕ ಮೀಟಿಂಗ್ ಭತ್ತೆ | 50,000.00 | ಶೇರು ಫೀ | 2,50,000-00 |
| ವೇತನ | 1,75,00,000.00 | ಕೆ ಡಿ ಸಿ ಸಿ ಶೇರ್ ಡಿವಿಡೆಂಟ್ | 1,60,000-00 |
| ಕಂಪ್ಯೂಟರ್ ಎಎಂಸಿ | 20,000.00 | ಇ-ಸ್ಟಾಂಪ್ ಸೇವಾ ಶುಲ್ಕ | 1,80,000-00 |
| ನೌಕರರ ಭತ್ತೆ | 15,000.00 | ಕಮೀಶನ | 8,25,000-00 |
| ಇತರೇ | 3,00,000.00 | ಸೇವಾ ಶುಲ್ಕ | 5,00,000-00 |
| ಕಂಪ್ಯೂಟರ ಸರ್ವಿಸ್ ವೆಚ್ಚ | 2,50,000.00 | ಸಾಲ ವಸೂಲಾತಿ ವೆಚ್ಚ | 2,00,000-00 |
| ಸಹಕಾರಿಯ ವಿಮಾ ಖಾತೆ | 5,50,000.00 | ಬಡ್ಡಿ ಆದಾಯ | 21,50,00,000-00 |
| ದಿನಕೂಲಿ | 1,50,000.00 | ಯುನಿಟಿ ಬ್ಯಾಂಕ್ ಶೇರು | |
| ಪಿಗ್ಮಿ ಕಮೀಷನ್ | 40,00,000.00 | ಡಿವಿಡೆಂಟ್ | 6,25,000-00 |
| ಪೋಸ್ಟೇಜ್ & ಟೆಲಿಫೋನ್ | 3,00,000.00 | | |
| ಪ್ರಿಂಟಿಂಗ್ & ಸ್ಟೇಶನರಿ | 6,00,000.00 | | |
| ವಿದ್ಯುತ್ ಬಿಲ್ | 3,50,000.00 | | |
| ಸಿಬ್ಬಂದಿ ಸಮವಸ್ತ್ರ ಖಾತೆ | 1,50,000.00 | | |
| ಸೌಹಾರ್ದ ಸಹಕಾರಿ ವಾರ್ಷಿಕ ಶುಲ್ಕ | 60,000.00 | | |
| ಸಂಚಿತ ವೇತನ | 2,75,000.00 | | |
| ಗೌರವ ಧನ | 2,75,000.00 | | |
| ಪ್ರಭಾರಿ ಶಾಖಾ ವ್ಯವಸ್ಥಾಪಕರ ಭತ್ತೆ | 40,000.00 | | |
| ಬಡ್ಡಿ ರಿಯಾಯತಿ | 65,00,000.00 | | |
| ಭವಿಷ್ಯ ನಿಧಿ ಆಡಳಿತ ವೆಚ್ಚ | 1,00,000.00 | | |
| ಸಹಕಾರಿ ವೃತ್ತಿ ತೆರಿಗೆ | 25,000.00 | | |
| ಸಿಟ್ಟಿಂಗ್ ಭತ್ತೆ | 1,25,000.00 | | |
| ಪ್ರಯಾಣ ಭತ್ತೆ | 1,50,000.00 | | |
| ವಾಹನ ಖಾತೆ ವೆಚ್ಚ | 2,50,000.00 | | |
| ವಾಹನ ಬಾಡಿಗೆ | 75,000.00 | | |
| ವಾಹನ ನಿಲುಗಡೆ ಶುಲ್ಕ | 2,00,000.00 | | |
| ಲೈಸೆನ್ಸ ನವೀಕರಣ | 10,000.00 | | |
| ಸ್ವಾಪ್ಟವೇರ ಮಾಸಿಕ ಶುಲ್ಕ | 8,50,000.00 | | |

(24ನೇ ಪುಟಕ್ಕೆ)

(23ನೇ ಪುಟದಿಂದ)

| ವೆಚ್ಚದ ವಿವರ | ರಕಂ | ಆದಾಯದ ವಿವರ | ರಕಂ |
|---|---|---|---|
| ಆರ್‌ಡಿ ಕಮೀಷನ್ | 60,000.00 | | |
| ಸೌಹಾರ್ದ ಒಕ್ಕೂಟ ಶುಲ್ಕ | 5,000.00 | | |
| ವಕಾಲತ್ ಫೀ | 2,00,000.00 | | |
| ಸಹಕಾರಿ ಆಸ್ತಿ ತೆರಿಗೆ | 15,000.00 | | |
| ಜಾಹಿರಾತು ವೆಚ್ಚ | 30,000.00 | | |
| ದೇಣಿಗೆ | 50,000.00 | | |
| ಸಿಬ್ಬಂಧಿಸಭೆಯ ವೆಚ್ಚ | 25,000.00 | | |
| ಸಿಐಎಸ್‌ಜಿಐಎಲ್ ವಾರ್ಷಿಕ ಶುಲ್ಕ | 11,000.00 | | |
| ಬ್ಯಾಂಕ್ ಸೇವಾಶುಲ್ಕ | 40,000.00 | | |
| ಠೇವುಗಳ ಮೇಲಿನ ಬಡ್ಡಿ | 16,25,00,000.00 | | |
| ನಿರ್ದೇಶಕರ ವಾಹನ ಭತ್ಯೆ | 10,000.00 | | |
| ಸಿಬ್ಬಂದಿ ಪ್ರೋತ್ಸಾಹ ಧನ | 30,000.00 | | |
| ಟಿ ಡಿ ಎಸ್ ರಿಟರ್ನ ಫೈಲಿಂಗ್‌ವೆಚ್ಚ | 20,000.00 | | |
| ನೌಕರರ ಎಚ್ ಸಿ ಡಿ ಎಮ್ ತರಬೇತಿ ವೆಚ್ಚ | 50,000.00 | | |
| ಸಹಾಯಧನ | 20,000.00 | | |
| ಜಿ ಎಸ್ ಟಿ ರಿಟರ್ನ ಫೈಲಿಂಗ್‌ವೆಚ್ಚ | 25,000.00 | | |
| ನಿರ್ದೇಶಕರ /ಸಲಹೆಗಾರರ ಪ್ರವಾಸ ಭತ್ಯೆ | 10,000.00 | | |
| ಲಾಭ | 2,42,44,000.00 | | |
| ಅಂತೂ... | **22,37,65,000.00** | ಅಂತೂ... | **22,37,65,000.00** |

# ಯು. ಕೆ. ಸೌಹಾರ್ದ ಕ್ರೆಡಿಟ್ ಸಹಕಾರಿ ಸಂಘ ನಿ.,

ಯಲ್ಲಾಪುರ (ಉ. ಕ.)

## ಜಾಮೀನುದಾರರ ಜವಾಬ್ದಾರಿ ಮತ್ತು ಕರ್ತವ್ಯಗಳು :

* ಪ್ರತಿಯೊಬ್ಬ ಜಾಮೀನುದಾರನೂ ಸಹ ಸಾಲಗರನಷ್ಟೇ ಸಾಲಕ್ಕೆ ಜವಾಬ್ದಾರನಾಗಿರುತ್ತಾನೆ.

* ಜಾಮೀನು ನೀಡುವ ಪೂರ್ವದಲ್ಲಿ ಸಾಲಗಾರನ ಆರ್ಥಿಕ ಸ್ಥಿತಿ, ಸಾಲದ ಉದ್ದೇಶ ಮತ್ತು ಸಾಲದ ಮರುಪಾವತಿ ಸಾಮರ್ಥ್ಯ ಇವುಗಳನ್ನು ಪರಿಶೀಲಿಸಕೊಳ್ಳತಕ್ಕದ್ದು.

* ನಿಗದಿತ ಕಾಲಕ್ಕೆ ಸಾಲಗಾರನು ಕಂತನ್ನು ಕಟ್ಟದಿದ್ದರೆ ಸಾಲಗಾರನಿಗೆ ತಿಳಿಸಿ ಹೇಳಬೇಕು.

* ಸಾಲಗಾರನು ಸಾಲ ಮರುಪಾವತಿ ಮಾಡದಿದ್ದಲ್ಲಿ ಅದನ್ನು ಮರುಪಾವತಿ ಮಾಡಿಸುವ ಅಥವಾ ಸ್ವತಃ ಮರುಪಾವತಿ ಮಾಡುವ ಹೊಣೆ ಜಾಮೀನುದಾರನದ್ದಾಗಿರುತ್ತದೆ.

* ಕರ್ನಾಟಕ ಸೌಹಾರ್ದ ಸಹಕಾರಿ ಕಾನೂನಿನ ಮೇರೆಗೆ ಸಾಲಗರನು ಸುಸ್ತಿ ಬಾಕಿದಾರನದರೆ ಜಾಮೀನುದಾರನೂ ಸಹ ಸುಸ್ತಿ ಬಾಕಿದಾರನೆಂದು ಪರಿಗಣಿಸಲ್ಪಡುತ್ತಾನೆ.

* ಸಾಲಕ್ಕೆ ಜಾಮೀನು ನೀಡಿದಲ್ಲಿ ಆ ಸಾಲ ಚುಕ್ತಾ ಆಗುವವರೆಗೂ ಜಾಮೀನುದಾರ ಜವಾಬ್ಧಾರನಾಗಿರುತ್ತಾನೆ.

* ಜಾಮೀನು ನೀಡಿದ ಸಾಲ ಕಟಬಾಕಿ ಆದಲ್ಲಿ ಜಾಮೀನುದಾರನ ವಯಕ್ತಿಕ ವ್ಯವಹಾರಕ್ಕೂ ಸಹ ತೊಂದರೆಯಾಗುತ್ತದೆ.

## ಯು. ಕೆ. ಸೌಹಾರ್ದ ಕ್ರೆಡಿಟ್ ಸಹಕಾರಿ ಸಂಘ ನಿಯಮಿತ

ಪ್ರಧಾನ ಕಛೇರಿ : 1ನೇ ಕ್ರಾಸ್, ಐ. ಬಿ. ರಸ್ತೆ, ಯಲ್ಲಾಪುರ - 581 359 (ಉ.ಕ.)

### ಠೇವಿನ ಬಡ್ಡಿದರಗಳು 01-04-2023 ರಿಂದ

| ಅವಧಿ | ಬಡ್ಡಿದರ |
|---|---|
| 30 ದಿನಗಳಿಂದ 91 ದಿನಗಳವರೆಗೆ | 5.50 % |
| 92 ದಿನಗಳಿಂದ 181 ದಿನಗಳವರೆಗೆ | 6.50 % |
| 182 ದಿನಗಳಿಂದ 1 ವರ್ಷಗಳ ಒಳಗೆ | 7.50 % |
| 1 ವರ್ಷಕ್ಕೆ | 9.00 % |
| 1 ವರ್ಷ ಮೇಲ್ಪಟ್ಟು | 8.00 % |

ಹಿರಿಯ ನಾಗರಿಕರು,
ನಿವೃತ್ತ ಸೈನಿಕರು,
ವಿಧವೆಯರು, ಅಂಗವಿಕಲರಿಗೆ
ಶೇ 0.50%
ಹೆಚ್ಚಿನ ಬಡ್ಡಿ ನೀಡಲಾಗುವುದು.

**ಉಳಿತಾಯ ಖಾತೆ 3.00 %**

**ಫ್ಲೆಕ್ಸಿ ಉಳಿತಾಯ ಖಾತೆ ಯೋಜನೆ**

**ಪಿಗ್ಮಿಠೇವು : 1 ವರ್ಷ ಹಾಗೂ ಮೇಲ್ಪಟ್ಟು 4%**

### ರಿಕರಿಂಗ್ ಠೇವು

| | |
|---|---|
| 1 ವರ್ಷಕ್ಕೆ | 9% |
| 2 ವರ್ಷದಿಂದ 3 ವರ್ಷದ ವರೆಗೆ | 9.50% |



## ಬನ್ನಿ, ನಮ್ಮ ಸಹಕಾರಿ ಕುಟುಂಬದಲ್ಲಿ ಪಾಲ್ಗೊಳ್ಳಿ

**ಶ್ರೀ ಎನ್. ಜಿ. ಕಿರಣ**
ಪ್ರಧಾನ ವ್ಯವಸ್ಥಾಪಕರು
ಹಾಗೂ ಸಿಬ್ಬಂದಿ ವರ್ಗ

**ಶ್ರೀ ಸುಬ್ಬಯ್ಯ ಧೋಗಳೆ**
ಉಪಾಧ್ಯಕ್ಷರು

**ಶ್ರೀ ಪ್ರಮೋದ ಹೆಗಡೆ**
ಅಧ್ಯಕ್ಷರು

ಹಾಗೂ ಆಡಳಿತ ಮಂಡಳಿ ಸದಸ್ಯರು

# 23ನೇ

# ವಾರ್ಷಿಕ ವರದಿ

ಹಾಗೂ

# ಅಢಾವೆ ಪತ್ರಿಕೆ

**2023-24**

ಕಳುಹಿಸಿದ ಬಗ್ಗೆ ದಾಖಲಾತಿ ಪಡೆಯಲಾಗಿದೆ,.

ತೆರೆದ-ಅಂಚೆ

ಗೆ,

ಶ್ರೀಮತಿ/ಶ್ರೀ ______________________

______________________

______________________

______________________

: ಇಂದ :

**ಯು. ಕೆ. ಸೌಹಾರ್ದ ಕ್ರೆಡಿಟ್ ಸಹಕಾರಿ ಸಂಘ ನಿಯಮಿತ**

**ಪ್ರಧಾನ ಕಛೇರಿ : 1ನೇ ಕ್ರಾಸ್, ಐ. ಬಿ. ರಸ್ತೆ, ಯಲ್ಲಾಪುರ - 581 359 (ಉ.ಕ.)**

ಚೇತನಾ ಸಹಕಾರಿ ಮುದ್ರಣ, ಶಿರಸಿ # 08384-414526